ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜುಲೈ 28, 2024

ಸಂಪುಟ : 51 ಸಂಚಿಕೆ : 75 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಒಲಂಪಿಕ್ಸ್




ಐಫೆಲ್ ಟವರ್ ಮುಂಭಾಗದಲ್ಲಿ ಆಯೋಜಿಸಲಾಗಿದ್ದ ಫ್ರಾನ್ಸ್ ಒಲಂಪಿಕ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ದೃಶ್ಯ.

# ಕಾಂಗ್ರೆಸ್‌ನಿಂದ ಸತ್ಯ ಸಂದೇಶ

**ಬಿಜೆಪಿ-ಜೆಡಿಎಸ್ ವಿರುದ್ಧ ಬೃಹತ್ ಸಮಾವೇಶ ನಡೆಸಲು ತೀರ್ಮಾನ**

ಬೆಂಗಳೂರು, ಜು. 27 - ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮೇಲೆ ದಿನನಿತ್ಯ ಭ್ರಷ್ಟಾಚಾರ ಆರೋಪಗಳನ್ನು ಹೊರಿಸುತ್ತಿರುವ ಬಿಜೆಪಿ-ಜೆಡಿಎಸ್ ವಿರುದ್ಧ ಮೈಸೂರಿ ನಲ್ಲಿ 'ಸತ್ಯ ಸಂದೇಶ' ಎಂಬ ಬೃಹತ್ ಸಮಾವೇಶ ವನ್ನು ಪ್ರದೇಶ ಕಾಂಗ್ರೆಸ್ ಹಮ್ಮಿಕೊಳ್ಳುತ್ತಿದೆ.

ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ದಲ್ಲಿನ ಬಿಡಿ ನಿವೇಶನ ಹಂಚಿಕೆ ಹಗರಣ ಮುಂದಿ ಟ್ಟುಕೊಂಡು ಪ್ರತಿಪಕ್ಷಗಳ ನಾಯಕರು ದಿನನಿತ್ಯ ಸಾರ್ವಜನಿಕರಲ್ಲಿ ತಪ್ಪು ಭಾವನೆ ಮೂಡಿಸು ತ್ತಿದ್ದಾರೆ ಎಂದು ಕಾಂಗ್ರೆಸ್ ಹೇಳುತ್ತಿದೆ.

ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂ. ಅವ್ಯವಹಾರ ಆರೋಪ ಬರುತ್ತಿದ್ದಂತೆ ಸರ್ಕಾರ ಎಸ್‌ಐಟಿ ರಚನೆ ಮಾಡಿ, ಇಲಾಖಾ ಸಚಿವರ ರಾಜೀನಾಮೆ ಪಡೆದು, ಅಧಿಕಾರಿಗಳನ್ನು ಜೈಲಿಗೆ ಕಳುಹಿಸಿದೆ, ಅಷ್ಟೇ ಅಲ್ಲದೆ, ಬ್ಯಾಂಕ್ ನೀಡಿದ ದೂರಿನ ಆಧಾರದ ಮೇಲೆ ಸಿಬಿಐ ಮತ್ತು ಇ.ಡಿ. ಪ್ರತ್ಯೇಕ ತನಿಖೆಗಳನ್ನು ನಡೆಸುತ್ತಿವೆ. ಮುಖ್ಯಮಂತ್ರಿ ಅವರ ಕುಟುಂಬ ಕಾನೂನು ಬದ್ಧವಾಗಿ ಮುಡಾ ದಿಂದ ಬಿಡಿ ನಿವೇಶನಗಳನ್ನು ಪಡೆದಿದ್ದರೂ ಅದನ್ನು ಬಿಜೆಪಿ ಮತ್ತು ಜೆಡಿಎಸ್ ರಾಜಕೀಯ ವಾಗಿ ಬಳಸಿಕೊಳ್ಳುತ್ತಿವೆ ಎಂದು ಕಾಂಗ್ರೆಸ್ ಹೇಳುತ್ತಿದೆ.

ಎರಡೂ ಪ್ರಕರಣಗಳಿಗೆ ಸಂಬಂಧಿಸಿ ದಂತೆಯೇ ವಿಧಾನಮಂಡಲದ ಅಧಿವೇಶನ ದಲ್ಲಿ ಚರ್ಚೆ ಮಾಡಿ ಜನಪರ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಲಿಲ್ಲ. ಅಷ್ಟೇ ಅಲ್ಲ, ಸಂಸತ್‌ನಲ್ಲೂ ಇದರ ಪ್ರಸ್ತಾಪ ಮಾಡಿ ಸಿದ್ದರಾಮಯ್ಯ ಸರ್ಕಾರದ ಮೇಲೆ ಕಪ್ಪುಚುಕ್ಕಿ ಇಡುವ ಕೆಲಸ ಮಾಡುತ್ತಿದ್ದಾರೆ ಎಂದು ಪಕ್ಷ ಟೀಕಿಸಿದೆ.

ಇದೀಗ ಬೆಂಗಳೂರಿನಿಂದ ಮೈಸೂರಿಗೆ ಉಭಯ ಪಕ್ಷಗಳು ಪಾದಯಾತ್ರೆ ಹಮ್ಮಿಕೊಂಡಿವೆ, ಇವರು ಪಾದಯಾತ್ರೆ ನಡೆಸುವ ತೀರ್ಮಾನ ಕೈಗೊಂಡಿದ್ದೇ ಆದಲ್ಲಿ, ಯಾತ್ರೆ ಸಂದರ್ಭದಲ್ಲೇ 'ಸತ್ಯ ಸಂದೇಶ ಸಮಾವೇಶ' ನಡೆಸಿ ರಾಜ್ಯದ ಜನತೆ ಮುಂದೆ ಸತ್ಯ ಬಿಚ್ಚಿಡಲು ಕಾಂಗ್ರೆಸ್ ಮುಂದಾಗಿದೆ.

ಪಾದಯಾತ್ರೆಗೆ ಪ್ರತಿಯಾಗಿ ಪಾದಯಾತ್ರೆ ಮಾಡದಿರಲು ಕಾಂಗ್ರೆಸ್ ತೀರ್ಮಾನಿಸಿದ್ದು, ಸಮಾವೇಶದ ಮೂಲಕವೇ ಪ್ರತಿಪಕ್ಷಗಳಿಗೆ ಉತ್ತರ ನೀಡಲು ಮುಂದಾಗಿದೆ.

ಅಷ್ಟೇ ಅಲ್ಲ, ಜಿಲ್ಲಾ ಕೇಂದ್ರಗಳಲ್ಲೂ ಸಮಾವೇಶ ನಡೆಸಿ ಬಿಜೆಪಿ- (4ನೇ ಪುಟಕ್ಕೆ)

# ತೃಪ್ತಿ ಗುಣದಿಂದ ಸಮಾಜದಲ್ಲಿ ಶಾಂತಿ

## ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂತೋಷ್ ಹೆಗ್ಡೆ ಅಭಿಮತ



ದಾವಣಗೆರೆ, ಜು. 27- ಜೀವನದಲ್ಲಿ ದುರಾಸೆಯನ್ನು ಕಡಿಮೆ ಮಾಡಿಕೊಳ್ಳಿ, ತೃಪ್ತಿ ಗುಣ ಅಳವಡಿಸಿ ಕೊಳ್ಳಿ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಶನಿವಾರ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ನೀಡುವ ಕನ್ನಡ ಕೌಸ್ತುಭ, ಸರಸ್ವತಿ ಪುರಸ್ಕಾರ ರಾಜ್ಯ ಪ್ರಶಸ್ತಿ ಹಾಗೂ ಜಿಲ್ಲಾ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

> **ಮಾನವೀಯತೆ ಎಂಬುದು ಹಿರಿಯರು ಕಟ್ಟಿದ ಸಾಮಾಜಿಕ ಮೌಲ್ಯ. ಸಮಾಜದಲ್ಲಿ ಶಾಂತಿ ಇರಬೇಕಾದರೆ ಮಾನವೀಯತೆ ಇರಬೇಕು.**
> **- ಸಂತೋಷ್ ಹೆಗ್ಡೆ**

ಎಲ್ಲ ರೋಗಗಳಿಗೆ ಮದ್ದು ಇದೆ. ಆದರೆ, ಮನುಷ್ಯನ ದುರಾಸೆಗಳಿಗೆ ಮದ್ದು ಇಲ್ಲ. ದುರಾಸೆ ಕಾರಣದಿಂದಾಗಿಯೇ ಕಳೆದ ಹಲವು ದಶಕಗಳಲ್ಲಿ ದೇಶದಲ್ಲಿ ಸಾಕಷ್ಟು ಹಗರಣಗಳು ನಡೆದಿವೆ. 1950ನೇ ದಶಕದಿಂದ ಇಲ್ಲಿಯವರೆಗೂ ಜೀಪ್, ಬೋಫೋರ್ಸ್, ಕಾಮನ್ವೆಲ್ತ್ ಕ್ರೀಡಾಕೂಟ, ಕಲ್ಲಿದ್ದಲು ಮತ್ತು 2ಜಿ ಹಗರಣಗಳಲ್ಲಿ ಸಾವಿರಾರು ಕೋಟಿ ರೂಗಳನ್ನು ಅಧಿಕಾರಿಗಳು ಲೂಟಿ ಮಾಡಿ ದ್ದಾರೆ. ಇದು ಹೀಗಿಯೇ ಮುಂದುವರೆದರೆ ಸಮಾಜದಲ್ಲಿ ಶಾಂತಿ ನೆಲೆಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ದುರಾಸೆಯಿಂದ ಎಷ್ಟು ಸಂಪತ್ತು ಪಡೆದರೂ ಸಂತಸ ಇರುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ಪಡೆದ ಸಂಪತ್ತಿನಿಂದ ಮಾತ್ರ ತೃಪ್ತಿ ಸಾಧ್ಯ. ಈ ಹಿನ್ನೆಲೆಯಲ್ಲಿ ಇದ್ದುದರಲ್ಲಿಯೇ ತೃಪ್ತಿ ಪಡುವ ಗುಣವನ್ನು ಅಳವಡಿಸಿ ಕೊಂಡರೆ ಜೀವನ ಸಾರ್ಥಕವಾಗುತ್ತದೆ ಎಂದು ಸಲಹೆ ನೀಡಿದರು.

ಪ್ರಸ್ತುತ ದಿನಗಳಲ್ಲಿ ಶ್ರೀಮಂತಿಕೆಯನ್ನು ಪೂಜಿಸಲಾಗುತ್ತಿದೆ. ಜನರು ಹಣ ಹಾಗೂ ಅಧಿಕಾರದ ಬೆನ್ನು ಬಿದ್ದಿದ್ದಾರೆ. ಮೊದಲು ಜೈಲಿಗೆ ಹೋಗಿ ಬಂದವರಿಂದ ದೂರ ಇರುತ್ತಿದ್ದರು. ಇಂದು ಜೈಲಿಗೆ ಹೋದವರನ್ನು ಮೆರವಣಿಗೆ (4ನೇ ಪುಟಕ್ಕೆ)

# ಭದ್ರಾ ಡ್ಯಾಂ ಭರ್ತಿಗೆ ಕ್ಷಣಗಣನೆ

ಶಿವಮೊಗ್ಗ, ಜು.27- ಮಲೆನಾಡಿನಲ್ಲಿ ಉತ್ತಮ ಮುಂಗಾರು ಮಳೆ ಆಗುತ್ತಿರುವುದರಿಂದ ಮಧ್ಯ ಕರ್ನಾಟಕದ ಜೀವನಾಡಿ ಭದ್ರಾ ಜಲಾಶಯವು ಈ ವರ್ಷ ಜುಲೈ ತಿಂಗಳಲ್ಲೇ ಭರ್ತಿ ಆಗುವ ಕ್ಷಣ ಗಣನೆಯಲ್ಲಿದೆ.

2022 ರಲ್ಲಿ ಜಲಾಶಯವು ಜುಲೈ 15 ಕ್ಕೇ ಭರ್ತಿಯಾಗಿ ನೀರನ್ನು ನದಿಗೆ ಬಿಡಲಾಗಿತ್ತು. ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ನಿರೀಕ್ಷಿತ ಮಳೆ ಆಗದ ಕಾರಣ ಜಲಾಶಯ 175 ಅಡಿ ದಾಟಲಿಲ್ಲ. ಹಾಗಾಗಿ ಮಳೆಗಾಲದ ಬೆಳೆಗೆ ಆಫ್ ಅಂಡ್ ಆನ್ ಪದ್ಧತಿಯಲ್ಲಿ ನೀರು ಹರಿಸಿ, ನಂತರ ಬೇಸಿಗೆ ವೇಳೆ ತೋಟದ ಬೆಳೆಗಳಿಗೆ ಮಾತ್ರ ನೀರನ್ನು ಕಡಿಮೆ ಪ್ರಮಾಣದಲ್ಲಿ ಕೊಡಲಾಗಿತ್ತು.

ನೀರು ತಲುಪದ ಕೊನೆ ಭಾಗದ ತೋಟಗಳು ಒಣಗಿ ಹಾಳಾದವು. ಬೇಸಿಗೆ ಬೆಳೆ ಇಲ್ಲದೆ ಕಂಗಾಲಾಗಿರುವ ಅಚ್ಚುಕಟ್ಟಿನ ರೈತರಿಗೆ ಜಲಾಶಯ ತುಂಬುತ್ತಿರುವುದು ಇನ್ನಿಲ್ಲದ ಹರ್ಷ ತಂದಿದೆ. ತುಂಗಭದ್ರಾ ನದಿ ಪಾತ್ರದ ಮತ್ತು ದೇವರ ಬೆಳಕೆರೆ ಪಿಕಪ್ ಡ್ಯಾಮ್ ವ್ಯಾಪ್ತಿಯ ರೈತರು ಈಗಾಗಲೇ ಭತ್ತದ ನಾಟಿಯನ್ನು ಭರದಿಂದ ಮಾಡುತ್ತಿದ್ದಾರೆ. ಭದ್ರಾ ಅಚ್ಚುಕಟ್ಟಿನಲ್ಲಿ ಸ್ವಂತ ನೀರಿನ ಸೌಲಭ್ಯ ಇರುವ ರೈತರು ನಿರಂತರ ಮಳೆ ಆಗುವುದನ್ನು ಗಮನಿಸಿ (4ನೇ ಪುಟಕ್ಕೆ)

# ವಾಲ್ಮೀಕಿ ನಿಗಮ ಹಗರಣ : 16 ಕೆ.ಜಿ. ಬಂಗಾರ, 2.55 ಕೋಟಿ ರೂ. ವಶ

ಬೆಂಗಳೂರು, ಜು. 27 - ಮಹರ್ಷಿ ವಾಲ್ಮೀಕಿ ನಿಗಮ ಹಗರಣದ ತನಿಖೆಯಲ್ಲಿ ಪ್ರಮುಖ ಬೆಳವಣಿಗೆಯಾಗಿದ್ದು, ವಿಶೇಷ ತನಿಖಾ ತಂಡವು 16 ಕೆಜಿ ಬಂಗಾರ ಹಾಗೂ 2.55 ಕೋಟಿ ರೂಪಾಯಿಗಳನ್ನು ಇಬ್ಬರು ಆರೋಪಿಗಳಿಂದ ವಶಪಡಿಸಿಕೊಂಡಿದೆ.

ಇತ್ತೀಚೆಗೆ ನಡೆಸಿದ ದಾಳಿಯಲ್ಲಿ ಸತ್ಯ ನಾರಾಯಣ ವರ್ಮ ಮನೆಯಲ್ಲಿ 15 ಕೆಜಿ ಬಂಗಾರ ವಶಪಡಿಸಿಕೊಳ್ಳಲಾಗಿದೆ ಎಂದು ಎಸ್‌ಐಟಿ ಉನ್ನತ ಮೂಲಗಳು ತಿಳಿಸಿವೆ. ಹಗರಣದಿಂದ ಪಡೆದ ಹಣದಲ್ಲಿ ಐಷಾರಾಮಿ ಕಾರು ಖರೀದಿಸಿದ್ದನ್ನು ಆರೋಪಿ ಒಪ್ಪಿಕೊಂಡಿದ್ದಾನೆ ಎಂದು ಎಸ್.ಐ.ಟಿ. (4ನೇ ಪುಟಕ್ಕೆ)

ಶ್ರೀ ದುರ್ಗಾ ಆರ್ಥೋಪೆಡಿಕ್ ಸೆಂಟರ್
#393, 8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ-577002.



ಡಾ|| ರಮೇಶ್ ಪೂಜಾರ್
ಎಂ.ಬಿ.ಬಿ.ಎಸ್., ಎಂ.ಎಸ್ (ಆರ್ಥೋ) ಕ್ಲಿನಿಕಲ್ ಫೆಲೋಶಿಪ್ (ಮುಂಬಯಿ)
ಕೀಲು, ಮೂಳೆ ಮತ್ತು ಬೆನ್ನೆಲುಬು ಹಾಗೂ ಕೀಲು ಮರುಜೋಡಣೆ ಶಸ್ತ್ರ ಚಿಕಿತ್ಸಾ ತಜ್ಞರು
ಭೇಟಿಯ ಸಮಯ : ಮಧ್ಯಾಹ್ನ 12:30 ರಿಂದ ಸಂಜೆ 3:30 ರವರೆಗೆ
ಸಂಜೆ 7 ರಿಂದ ರಾತ್ರಿ 8 ರವರೆಗೆ ಭಾನುವಾರ ರಜಾ
For appointment contact : 99727 39168
• ORTHOPAEDIC SURGERIES
• SPINE SURGERY
• JOINT REPLACEMENTS

COMMERCIAL SPACE FOR RENT




Carpet Area
Basement area (Parking) - 1700 Sft
Ground Floor - 1870 Sft
First Floor - 2454 Sft
Available in Total or Floor wise in Shabanur Road
Contact
98809 11249, Mohan - 98801 79014

## ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ : 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ -2. ಫೋನ್ : 272570

THE DAVANGERE-HARIHARA URBAN SAHAKARA BANK NIYAMITHA

### 52ನೇ ವಾರ್ಷಿಕ ಮಹಾಸಭೆಯ ನೋಟಿಸ್



ಲಿಂ. ವೇ. ಶ್ರೀ ಎಸ್.ಎಂ.ಜೆ.ಬಿ.ಆರಾಧ್ಯ
ಸಂಸ್ಥಾಪಕರು



ಶ್ರೀ ಎನ್.ಎ. ಮುರುಗೇಶ್
ಅಧ್ಯಕ್ಷರು

**ಮಾನ್ಯ ಸದಸ್ಯರುಗಳ ಗಮನಕ್ಕೆ**


ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ 2023-24ನೇ ಸಾಲಿನ 52ನೇ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಎ. ಮುರುಗೇಶ್ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ : 28.07.2024ನೇ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ತ್ರಿಶೂಲ್ ಕಲಾ ಭವನ, ಪಿ.ಬಿ. ರಸ್ತೆ, ದಾವಣಗೆರೆಯಲ್ಲಿ ಕರೆಯಲಾಗಿದೆ. ಈಗಾಗಲೇ ಬ್ಯಾಂಕಿನ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ದಿನಾಂಕ : 31.03.2024ಕ್ಕೆ ಇದ್ದಂತೆ ಪ್ರಗತಿ ಪಕ್ಷಿ ನೋಟ**

| ಕ್ರ.ಸಂ. | ವಿವರ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 01 | ಷೇರು ಬಂಡವಾಳ | 615-32 |
| 02 | ಆಪದ್ಧನ ಮತ್ತು ಇತರೆ ನಿಧಿಗಳು | 6,025-67 |
| 03 | ಠೇವಣಿಗಳು | 35,203-46 |
| 04 | ಸಾಲ ಮತ್ತು ಮುಂಗಡಗಳು | 28,761-67 |
| 05 | ಸಂಚಯಗಳು | 9,487-21 |
| 06 | ದುಡಿಯುವ ಬಂಡವಾಳ | 42,775-01 |
| 07 | ಒಟ್ಟು ಲಾಭ | 892-40 |
| 08 | ನಿವ್ವಳ ಲಾಭ (ಅವಕಾಶಗಳು ಮತ್ತು ಆದಾಯ ತೆರಿಗೆ ಪಾವತಿಸಿದ ನಂತರ) | 586-17 |
| 09 | ಸದಸ್ಯರ ಸಂಖ್ಯೆ | 11396 |
| 10 | ಎನ್.ಪಿ.ಎ. ಪ್ರಮಾಣ (ನಿವ್ವಳ) | 0.38 |
| | 'ಅ' ಶ್ರೇಣಿಯ ಬ್ಯಾಂಕ್ | |

**ಸೂಚನೆ :** ಹರಿಹರದ ಸದಸ್ಯರುಗಳಿಗೆ ಹರಿಹರದಿಂದ ವಾರ್ಷಿಕ ಮಹಾಸಭೆಗೆ ಬರಲು ಬ್ಯಾಂಕಿನ ಮುಂಭಾಗದಲ್ಲಿ ಬೆಳಿಗ್ಗೆ 10 ಗಂಟೆಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ.

**ಆಡಳಿತ ಮಂಡಳಿ ನಿರ್ದೇಶಕರುಗಳು**



ಶ್ರೀಮತಿ ಜಯಮ್ಮ ಪರಶುರಾಮಪ್ಪ, ಉಪಾಧ್ಯಕ್ಷರು; ಶ್ರೀ ಎ.ಹೆಚ್. ಕುಬೇರಪ್ಪ, ನಿರ್ದೇಶಕರು; ಶ್ರೀ ಕಿರುವಾಡಿ ವಿ. ಸೋಮಶೇಖರ್, ನಿರ್ದೇಶಕರು; ಶ್ರೀ ಶಂಕರ್ ಖಟಾವ್‌ಕರ್, ನಿರ್ದೇಶಕರು; ಶ್ರೀ ಬಿ. ಚಿದಾನಂದಪ್ಪ, ನಿರ್ದೇಶಕರು; ಶ್ರೀ ಎಸ್.ಕೆ. ಪ್ರಭು ಪ್ರಸಾದ್, ನಿರ್ದೇಶಕರು; ಶ್ರೀ ಕೆ.ಎಂ. ಜ್ಯೋತಿ ಪ್ರಕಾಶ್, ನಿರ್ದೇಶಕರು; ಶ್ರೀ ಪಿ.ಹೆಚ್. ವೆಂಕಪ್ಪ, ನಿರ್ದೇಶಕರು; ಶ್ರೀ ನಾಗೇಂದ್ರಚಾರಿ ಬಿ., ನಿರ್ದೇಶಕರು



ಶ್ರೀಮತಿ ಉಮಾ ವಾಗೀಶ್, ನಿರ್ದೇಶಕರು; ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್, ನಿರ್ದೇಶಕರು; ಶ್ರೀಮತಿ ಅನುಪಾ ಡಾ. ವೀರೇಂದ್ರಸ್ವಾಮಿ, ನಿರ್ದೇಶಕರು; ಶ್ರೀ ಕೊಟ್ರೇಶ್ ಎ., ನಿರ್ದೇಶಕರು; ಶ್ರೀ ವಿಶಾಲ್ ಕುಮಾರ್ ಆರ್. ಸಂಘವಿ, ನಿರ್ದೇಶಕರು; ಶ್ರೀ ಆರ್.ವಿ. ಶಿರಸಾಲಿಮಠ್, ವೃತ್ತಿಪರ ನಿರ್ದೇಶಕರು; ಶ್ರೀ ಕಿರಣ್ ಆರ್. ಶೆಟ್ಟಿ, ವೃತ್ತಿಪರ ನಿರ್ದೇಶಕರು; ಶ್ರೀ ಎನ್. ತುಳಸೀನಾಥ್, ಪ್ರಧಾನ ವ್ಯವಸ್ಥಾಪಕರು

ಹಿರಿಯ ಸದಸ್ಯರು



ಶ್ರೀ ಎ.ಹೆಚ್. ಕುಬೇರಪ್ಪ, ಅಧ್ಯಕ್ಷರು; ಶ್ರೀ ಕಿರುವಾಡಿ ವಿ. ಸೋಮಶೇಖರ್, ಸದಸ್ಯರು; ಶ್ರೀ ಕೆ.ಎಂ. ಬಸವರಾಜ್, ಸದಸ್ಯರು; ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ, ಸದಸ್ಯರು; ಶ್ರೀಮತಿ ಜೆ.ಸಿ. ವಸುಂಧರ, ಸದಸ್ಯರು

ಬ್ಯಾಂಕಿನ ಉಪನಿಯಮ 20(1)(i)ರನ್ವಯ ಬ್ಯಾಂಕಿನ ಸದಸ್ಯರು ಕನಿಷ್ಟ ಷೇರು ಮೊತ್ತ ರೂ. 1,000/- ಹೊಂದಿರತಕ್ಕದ್ದು ಮತ್ತು ಉಳಿತಾಯ ಖಾತೆಯನ್ನು ಹೊಂದಿ ಕನಿಷ್ಟ ವ್ಯವಹಾರ ಮಾಡುವುದು ಕಡ್ಡಾಯವಿರುತ್ತದೆ. ಖಾತೆ ಹೊಂದಿರದ ಸದಸ್ಯರ ಲಾಭಾಂಶ ಹೊಂದಾಣಿಕೆಯಾಗದೇ ಮೂರು ವರ್ಷಗಳ ನಂತರ ಮೀಸಲು ನಿಧಿಗೆ ವರ್ಗಾವಣೆ ಮಾಡಬೇಕಾಗುತ್ತದೆ. ಹಾಗೂ ಬ್ಯಾಂಕಿನಿಂದ ನೀಡುವ ಯಾವುದೇ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ ಮತ್ತು ಬ್ಯಾಂಕಿನ ಆಡಳಿತ ಮಂಡಲಿ ಚುನಾವಣೆಗೆ ಸ್ಪರ್ಧಿಸಲು/ಮತ ನೀಡಲು ಬರುವುದಿಲ್ಲ. ಆದ್ದರಿಂದ ಭಾಗಶಃ ಷೇರು ಮೊತ್ತ ಹೊಂದಿರುವ ಮತ್ತು ಉಳಿತಾಯ ಖಾತೆಯನ್ನು ಹೊಂದಿರದ ಮಾನ್ಯ ಸದಸ್ಯರುಗಳು ಈ ಕೂಡಲೇ ಆಡಳಿತ ಕಛೇರಿಗೆ /ಸಮೀಪದ ಶಾಖೆಗೆ ಭೇಟಿ ನೀಡಿ ಷೇರು ಮೊತ್ತವನ್ನು ರೂ. 1,000/-ಗಳಿಗೆ ಸರಿ ಮಾಡಿಕೊಳ್ಳಲು ಹಾಗೂ ಉಳಿತಾಯ ಖಾತೆಯನ್ನು ತೆರೆಯಲು ಈ ಮೂಲಕ ಕೋರಲಾಗಿದೆ. ಬಹಳಷ್ಟು ಸದಸ್ಯರುಗಳ ವಿಳಾಸ ಬದಲಾವಣೆಯಾಗಿ, ಪ್ರತಿ ವರ್ಷ ಕಳುಹಿಸುವ ವಾರ್ಷಿಕ ವರದಿಗಳು ವಾಪಸ್ಸು ಬರುತ್ತಿವೆ. ಆದ್ದರಿಂದ ಸದಸ್ಯರುಗಳು ತಮ್ಮ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ತಮ್ಮ ಸಮೀಪದಲ್ಲಿ ಇರುವ ನಮ್ಮ ಶಾಖೆಗಳಿಗೆ ಭೇಟಿ ನೀಡಿ ಕೂಡಲೇ ಕೆ.ವೈ.ಸಿ. ಮತ್ತು ಮೊಬೈಲ್ ಸಂಖ್ಯೆಯನ್ನು ಅಪ್‌ಡೇಟ್ ಮಾಡಿಕೊಳ್ಳಲು ಕೋರಿದೆ.

# ನೀತಿ ಸಭೆಯಲ್ಲಿ ವಿಕಸಿತ ಭಾರತದ ಚರ್ಚೆ




ನವದೆಹಲಿ, ಜು. 27 - 2047 ರ ವೇಳೆಗೆ ಭಾರತವನ್ನು ವಿಕಸಿತ ದೇಶವನ್ನಾಗಿಸುವ ನೀಲನಕ್ಷೆ ರೂಪಿಸುವ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯ ನೀತಿ ಆಯೋಗದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಲಾಯಿತು.

ನೀತಿ ಆಯೋಗದ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಲು ತಂತ್ರಜ್ಞಾನ ಹಾಗೂ ಭೂ ರಾಜಕೀಯದಲ್ಲಿ ಆಗಿರುವ ಬದಲಾವಣೆಗಳನ್ನು ಬಳಸಿಕೊಳ್ಳಬೇಕಿದೆ ಎಂದರು.

ಅಂತರರಾಷ್ಟ್ರೀಯ ಹೂಡಿಕೆಗಳನ್ನು ಆಕರ್ಷಿಸಲು ಅಗತ್ಯವಾದ ವಾತಾವರಣವನ್ನು ರಾಜ್ಯಗಳು ಕಲ್ಪಿಸಬೇಕು ಎಂದೂ ಅವರು ಹೇಳಿದರು. ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ನೀತಿ ಆಯೋಗದ ಸಭೆಯನ್ನು ಕರೆಯಲಾಗಿತ್ತು.

ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಲು ರಾಜ್ಯಗಳು ಸಕ್ರಿಯ ಪಾತ್ರ ವಹಿಸಬಹುದು. ರಾಜ್ಯಗಳು ಜನರ ಜೊತೆ ನೇರವಾಗಿ ಸಂಪರ್ಕ ಹೊಂದಿರುವುದರಿಂದ ಈ ದಿಸೆಯಲ್ಲಿ ಹೆಚ್ಚಿನ ಕೊಡುಗೆ ಸಾಧ್ಯ ಎಂದು ಹೇಳಿದರು.

2047 ರ ವೇಳೆಗೆ ಭಾರತವನ್ನು ವಿಕಸಿತಗೊಳಿಸುವುದು ಪ್ರತಿಯೊಬ್ಬ ಭಾರತೀಯನ ಮಹತ್ವಾಕಾಂಕ್ಷೆ ಎಂದ ಮೋದಿ, ಈ ದಶಕವು ತಂತ್ರಜ್ಞಾನ ಹಾಗೂ ಭೂ ರಾಜಕೀಯ ಬದಲಾವಣೆ ಮತ್ತು ಅವಕಾಶಗಳ ಸಮಯ ಎಂದು ಅಭಿಪ್ರಾಯಪಟ್ಟರು. ಭಾರತ ಈ ಅವಕಾಶಗಳನ್ನು ಬಳಸಿಕೊಳ್ಳಬೇಕು ಮತ್ತು ಅಂತರರಾಷ್ಟ್ರೀಯ ಹೂಡಿಕೆಗಳಿಗೆ ಅನುಕೂಲ ಆಗುವಂತೆ ತಮ್ಮ ನೀತಿಗಳನ್ನು ರೂಪಿಸಿಕೊಳ್ಳಬೇಕು. ಇದು ಭಾರತದ ಅಭಿವೃದ್ಧಿಗೆ ಮೆಟ್ಟಿಲಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಜನರ ಜೀವನ ಗುಣಮಟ್ಟ ಸುಧಾರಣೆ ಮತ್ತು ಸೇವೆಗಳನ್ನು ಒದಗಿಸುವ ವ್ಯವಸ್ಥೆಗಳನ್ನು ಬಲಪಡಿಸಬೇಕಿದೆ. ಈ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜೊತೆಯಾಗಿ ಕಾರ್ಯನಿರ್ವಹಿಸಬೇಕಿದೆ ಎಂದರು.

ನೂತನ ಶಿಕ್ಷಣ ನೀತಿ, ಮುದ್ರಾ, ವಿಶ್ವಕರ್ಮ, ಸ್ವನಿಧಿ ಯೋಜನೆ, ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಸುಧಾರಣೆ ಮತ್ತಿತರೆ ಕ್ರಮಗಳಿಂದ ಭಾರತೀಯ ಸಮಾಜ ಹಾಗೂ ಆರ್ಥಿಕತೆಯಲ್ಲಿ ಮಹತ್ವದ ಬದಲಾವಣೆಯಾಗಿದೆ ಎಂದು ಮೋದಿ ಹೇಳಿದರು.

ಭಾರತ ಯುವ ದೇಶವಾಗಿದೆ. ಭಾರತದಲ್ಲಿನ ಕಾರ್ಯಪಡೆ ವಿಶ್ವದ ಗಮನ ಸೆಳೆಯುತ್ತಿದೆ. ನಮ್ಮ ಯುವ ಪೀಳಿಗೆ ಕುಶಲ ಹಾಗೂ ಉದ್ಯೋಗಕ್ಕೆ ಅರ್ಹವಾಗುವಂತೆ ಕ್ರಮ ತೆಗೆದುಕೊಳ್ಳಬೇಕಿದೆ. ಕೌಶಲ್ಯ, ಸಂಶೋಧನೆ, ಆವಿಷ್ಕಾರ ಹಾಗೂ ಉದ್ಯೋಗ ಆಧಾರಿತ ಜ್ಞಾನಕ್ಕೆ ಆದ್ಯತೆ ನೀಡಬೇಕಿದೆ ಎಂದು ಪ್ರಧಾನಿ ಹೇಳಿದರು.

ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್ ಹಾಗೂ ಕೇಂದ್ರದ ಹಲವು ಸಚಿವರು ನೀತಿ ಆಯೋಗ ಮಂಡಳಿಯ ಸದಸ್ಯರಾಗಿದ್ದಾರೆ. ಪ್ರಧಾನಮಂತ್ರಿ ನೀತಿ ಆಯೋಗದ ಅಧ್ಯಕ್ಷರಾಗಿದ್ದಾರೆ.

**ಹೂಡಿಕೆ ಸೆಳೆಯುವ ವಾತಾವರಣಕ್ಕಾಗಿ ರಾಜ್ಯಗಳಿಗೆ ಕರೆ**

**ಮಾತನಾಡಲು ಅವಕಾಶ ನೀಡಲಿಲ್ಲ : ಮಮತಾ**

**ಕೊಲ್ಕತಾ, ಜು. 27 - ದೆಹಲಿಯಲ್ಲಿ ನಡೆದ ನೀತಿ ಆಯೋಗದ ಸಭೆಯಲ್ಲಿ ನಾನು ಮಾತನಾಡಲು ಅವಕಾಶ ನೀಡದೇ ಅವಮಾನಿಸಲಾಯಿತು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.**

**ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನನಗೆ ಮಾತನಾಡಲು ಅವಕಾಶ ನೀಡಲಿಲ್ಲ. ಪದೇ ಪದೇ ಗಂಟೆ ಭಾರಿಸಲಾಗುತ್ತಿತ್ತು. ಇದು ನನಗೆ ಮಾಡಿರುವ ಅವಮಾನ ಎಂದು ಹೇಳಿದರು.**

# ಹೊನ್ನಾಳಿ : ಪಂಪ್‌ಸೆಟ್‌ಗಳಿಗೆ ಆಧಾರ್ ಕಾರ್ಡ್ ನೋಂದಣಿಯಲ್ಲಿ ಸರ್ಕಾರದ ಹುನ್ನಾರ

## ಆಧಾರ್ ನೊಂದಣಿಗೆ ಮುಂದಾಗದಿರುವಂತೆ ಬಿದರಗಡ್ಡೆ ಭರಮಗೌಡ್ರು ಮನವಿ



ಹೊನ್ನಾಳಿ, ಜು.27- ರೈತರ ಜಮೀನುಗಳ ಪಂಪ್ ಸೆಟ್‌ಗಳಿಗೆ ಆಧಾರ್ ಕಾರ್ಡ್ ನೋಂದಣಿಯಲ್ಲಿ ಸರ್ಕಾರದ ದೊಡ್ಡ ಹುನ್ನಾರವಿದೆ. ರೈತರು ತಮ್ಮ ಜಮೀನುಗಳ ಪಂಪ್‌ಸೆಟ್‌ಗಳಿಗೆ ಆಧಾರ್ ಕಾರ್ಡ್ ನೋಂದಣಿ ಮಾಡದಿರುವಂತೆ ಜಿಲ್ಲಾ ರೈತ ಮುಖಂಡ ಬಿದರ ಗಡ್ಡೆ ಬಿ.ಕೆ ಭರಮ ಗೌಡ್ರು ರೈತರಲ್ಲಿ ಮನವಿ ಮಾಡಿದರು.

ಆರಂಭದಲ್ಲಿ ಹಳ್ಳಿ - ಹಳ್ಳಿಗೆ ಬರುತ್ತಿದ್ದ ಕೆಇಬಿ ಲೈನ್‌ಮನ್ ಗಳು ರೈತರ ಮನೆಗೆ ಬಂದು ಸರ್ಕಾರದ ವಿವಿಧ ಸೌಲಭ್ಯಗಳನ್ನು ನೀಡಲಿದೆ ಎಂದು ವಿವರಿಸುವ ಮೂಲಕ ಆಧಾರ್ ಕಾರ್ಡ್ ನೋಂದಣಿ ಪ್ರಕ್ರಿಯೆ ಆರಂಭಿಸಿದ್ದರು. ಆಧಾರ್ ಕಾರ್ಡ್ ಜೆರಾಕ್ಸ್ ಕೊಡಿ ಎಂದು ಈ ಪ್ರಕ್ರಿಯೆಗೆ ಚಾಲನೆ ನೀಡಿದ್ದರು ಎಂದು ಬಿದರ ಗಡ್ಡೆ ತಮ್ಮ ಜಮೀನಿನಲ್ಲಿ ರೈತರ ಪರ ಅಭಿಪ್ರಾಯ ಹಂಚಿಕೊಂಡರು.

ಕಳೆದೆರಡು ದಿನಗಳಿಂದ ಕೆಇಬಿಯಿಂದಲೇ ಪತ್ರಿಕೆಗೆ ಹೇಳಿಕೆಯೊಂದನ್ನು ಬಿಡುಗಡೆಗೊಳಿಸಿದ್ದನ್ನು ಗಮನಿಸಿ ಇಂದು ಕೆಇಬಿ ಇಂಜಿನಿಯರ್ ಅವರನ್ನು ಭೇಟಿ ಮಾಡಿ ಚರ್ಚಿಸುವ ಮೂಲಕ ಆಧಾರ್ ನೋಂದಣಿ ಕೈಬಿಡುವಂತೆ ಒತ್ತಾಯಿಸಿದ್ದೇನೆ ಎಂದರು.

ಕೆಲವು ಹಳ್ಳಿಗಳ ರೈತರು ನೋಂದಣಿ ಪ್ರಕ್ರಿಯೆಗೆ ಮುಂದಾಗುತ್ತಿರುವುದು ಕಂಡು ಬರುತ್ತಿದೆ ಯಾದರೂ, ವಿವಿಧ ರೈತ ಸಂಘಟನೆಗಳ ಪದಾಧಿಕಾರಿಗಳಾಗಿರುವವರು ರೈತರ ಸಭೆ ಮೂಲಕ ವಿಷಯ ತಿಳಿದ ರೈತರು ಪಂಪ್ ಸೆಟ್ ಗಳಿಗೆ ಆಧಾರ್ ಕಾರ್ಡ್ ನೋಂದಣಿಗೆ ಮುಂದಾಗುತ್ತಿಲ್ಲ ಎಂಬುದಾಗಿ ವಿವರಿಸಿದರು.

ಹೊನ್ನಾಳಿ ತಾಲ್ಲೂಕು ರೈತ ಸಂಘವು ಈ ವಿಷಯವಾಗಿ ಎಪಿಎಂಸಿಯ ರೈತ ಭವನದಲ್ಲಿ ಕಳೆದ ತಿಂಗಳು ಚರ್ಚೆ ನಡೆಸಿತ್ತು. ರೈತರು ಸಭೆಗೆ ಬಂದು ಚರ್ಚಿಸಿದ ವಿಷಯವನ್ನು ಇತರೆ ರೈತರಿಗೆ ತಿಳಿಸಲು ಮುಂದಾಗದಿರುವುದರಿಂದ ಒಮ್ಮತದ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ ಎಂದರು.

ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೈತರಿಗೆ ಉಚಿತ ವಿದ್ಯುತ್ ನೀಡಿದ್ದು, ಇದರ ಸದುಪಯೋಗ ಪಡೆದ ರೈತರ ಜೀವನ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡು, ಆರ್ಥಿಕ ಚೇತರಿಕೆ ಕಾಣುವಂತಾಗಿದೆ. ಇತ್ತೀಚಿನ ಸರ್ಕಾರಗಳ ವಿದ್ಯುತ್ ಖಾಸಗೀಕರಣದ ಪರಿಣಾಮ ಇಂತಹ ಬೆಳವಣಿಗೆಗೆ ಕಾರಣವಾಗುತ್ತಿದೆ.

ಕೇಂದ್ರ ಸರ್ಕಾರವು ಕೃಷಿ ಕಾಯ್ದೆಯನ್ನು ವಾಪಸ್ ತೆಗೆದುಕೊಂಡಿದ್ದು, ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಜಾರಿ ತಂದರು. ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾನೂನಾತ್ಮಕವಾಗಿ ಈವರೆಗೂ ಜಾರಿ ಮಾಡದಿರುವುದು ರಾಜ್ಯ ರೈತರ ದುರಾದೃಷ್ಟಕರ ಎಂದರು.

ಅತಿ ಹೆಚ್ಚು ಮಳೆ ಬಂದು ಬೆಳೆ ಹಾನಿ ಆದರೆ- ಮತ್ತೊಮ್ಮೆ ಮಳೆ ಕಮ್ಮಿಯಾಗಿ ಬೆಳೆಹಾನಿಯಾಗುತ್ತಿದ್ದು. ಬೆಳೆದ ಬೆಳೆಗಳಿಗೂ ಬೆಂಬಲ ಬೆಲೆ ಹಾಗೂ ವೈಜ್ಞಾನಿಕ ಬೆಲೆ ಸಿಗದೆ ಅತಿವೃಷ್ಟಿ ಹಾಗು ಅನಾವೃಷ್ಟಿಗೆ ಒಳಗಾಗುವ ರೈತರು ಅನೇಕ ಸಮಸ್ಯೆಗಳನ್ನು ಎದುರಿಸಿಕೊಂಡು ಬರುತ್ತಿದ್ದು, ಇತ್ತೀಚಿನ ದಿನಗಳಲ್ಲಿ ರೈತರ ಜಮೀನುಗಳ ವಿದ್ಯುತ್ ಬಳಕೆಯ ಸೌಕರ್ಯ ಪಡೆಯಲು ಅತಿ ಹೆಚ್ಚು ಹಣ ಖರ್ಚು ಮಾಡುವ ಸ್ಥಿತಿ ನಿರ್ಮಾಣವಾಗಿದೆ ಸರ್ಕಾರವು ಭಾಗ್ಯಗಳ ಹೆಸರಿನಲ್ಲಿ ಒಂದೆಡೆ ನೀಡಿ, ಮತ್ತೊಂದು ಕಡೆಯಿಂದ ವಾಪಸ್ ಪಡೆಯುವ ಪದ್ಧತಿಗೆ ಮುಂದಾಗಿದೆ.

ಇಂದಿನ ಯುವ ಪೀಳಿಗೆಯ ರೈತರಲ್ಲೇ ರೈತಾಪಿ ಬದುಕಿನ ಬಗ್ಗೆ ಆಸಕ್ತಿ ಇರದೇ ಉದಾಸೀನತೆಯೇ ಹೆಚ್ಚು ಕಂಡು ಬರುತ್ತಿದ್ದು, ಮುಂದೆ ಇದು ಅಪಾಯಕಾರಿ ಬೆಳವಣಿಗೆಗೆ ನಾಂದಿಯಾಗಲಿದೆ. ಇದಕ್ಕೆಲ್ಲ ರೈತರಿಗೆ ಪ್ರೋತ್ಸಾಹದಾಯಕವಾಗಿ ಸರ್ಕಾರಗಳು ನಿಲ್ಲಬೇಕಿದೆ.

ಆಧಾರ್ ನೋಂದಣಿ ಸೌಲಭ್ಯಗಳಿಗಾಗಿಯೇ ಇದೆ. ಅದರಲ್ಲಿ ತಪ್ಪೇನು ? ಎಂದು ನಮ್ಮ ಪ್ರತಿನಿಧಿಯ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಂದೊಂದು ದಿನ ಸರ್ಕಾರಗಳು ನೀವು ಸಣ್ಣ ರೈತರು - ದೊಡ್ಡ ರೈತರು, ಆ ಬೆಳೆಗಾರರು - ಈ ಬೆಳೆಗಾರರು ಎಂಬ ಗೊಂದಲ ರೈತರಲ್ಲೇ ಸೃಷ್ಟಿಸಿ, ರೈತರಿಗೆ ಇಷ್ಟೇ ವಿದ್ಯುತ್ ಬಳಕೆಯಾಗುತ್ತದೆ. ಖಾಸಗಿ ಕಂಪನಿಗಳಿಗೆ ಇಂತಿಷ್ಟು ವಿದ್ಯುತ್ ಬಳಕೆಯಾಗುತ್ತಿದೆ. ನೀವೇ ವಿದ್ಯುತ್ ಉತ್ಪಾದಿಸಿಕೊಳ್ಳಬಹುದಲ್ಲ ಹೀಗೆ ಹಲವಾರು ಸಮಸ್ಯೆಗಳಿಗೆ ಕಾರಣವಾಗಬಹುದು. ಉಚಿತ ವಿದ್ಯುತ್ ಎಂದ ಮೇಲೆ ಇದಕ್ಕೆಲ್ಲ ಏಕೆ ಸರ್ಕಾರ ಮುಂದಾಗಬೇಕು.

ಕೆಲವೊಂದು ಸೌಲಭ್ಯಗಳಿಗಾಗಿ ಆಧಾರ್ ನೋಂದಣಿ ಸರಿ ಇರಬಹುದಾದರೂ, ಈ ಪಂಪ್ ಸೆಟ್‌ಗಳಿಗೆ ಆಧಾರ್ ನೋಂದಣಿ ಸರಿಯಾದ ಕ್ರಮವಲ್ಲ ಎಂಬುದು ತಮ್ಮ ದೃಢವಾದ ನಿಲುವಾಗಿದ್ದು, ಮೇಲ್ಕಂಡ ವಿಷಯಗಳನ್ನಾಧರಿಸಿ ರೈತರು ತಮ್ಮ ನಿಲುವು ಬದಲಾಯಿಸಲು ಮುಂದಾದರೆ ಒಳಿತು ಎಂಬ ಅಭಿಪ್ರಾಯವನ್ನು ಮಾಧ್ಯಮದ ಮೂಲಕ ಹಂಚಿಕೊಂಡರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಡಿ.ಹೆಚ್ ಮಂಜುನಾಥ, ಬಿ.ಎನ್ ಮಹೇಶ್ವರಪ್ಪ ಇದ್ದರು.

# ವಿದ್ಯಾರ್ಥಿಗಳು ಕೌಶಲ್ಯ ಅಭಿವೃದ್ಧಿಪಡಿಸಿಕೊಳ್ಳಬೇಕು



**ಹರಿಹರದ ಕಾರ್ಯಕ್ರಮದಲ್ಲಿ ತಪೋವನ ಸಂಸ್ಥೆಯ ಮುಖ್ಯಸ್ಥ ಶಶಿಕುಮಾರ್ ಕರೆ**

ಹರಿಹರ, ಜು.27- ವಿದ್ಯಾರ್ಥಿಗಳು ಅಂಕ ಗಳಿಸುವ ಜತೆಗೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ತಪೋವನ ಸಂಸ್ಥೆಯ ಮುಖ್ಯಸ್ಥ ಶಶಿಕುಮಾರ್ ಹೇಳಿದರು.

ನಗರದ ಎಸ್.ಜೆ.ವಿ.ಪಿ. ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಉದ್ಯೋಗ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಉದ್ಯೋಗ ಪಡೆಯುವ ಯುವಕರಲ್ಲಿ ಮುಖ್ಯವಾಗಿ ಕೌಶಲ್ಯಗಳಿರಬೇಕು ಎಂದ ಅವರು, ಈ ವಿದ್ಯಾಸಂಸ್ಥೆ ಹರಿಹರಕ್ಕೆ ಕಿರೀಟವಿದ್ದಂತೆ ಎಂದು ಬಣ್ಣಿಸಿದರು.

ಸಂಸ್ಥೆಯ ಕಾರ್ಯದರ್ಶಿ ಪ್ರಶಾಂತ್ ದುಗ್ಗತ್ತಿಮಠ್ ಮಾತನಾಡಿ, ಕಾಲೇಜು ವತಿಯಿಂದ ಇದು 3ನೇ ಉದ್ಯೋಗ ಮೇಳವಾಗಿದ್ದು, ಬರುವ ದಿನಗಳಲ್ಲಿ ಬೃಹತ್ ಮಟ್ಟದ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ತಿಳಿಸಿದರು.

ಸಂಸ್ಥೆಯ ನಿರ್ದೇಶಕ ಎನ್.ಎಚ್. ಪಾಟೀಲ್, ಪ್ರಾಚಾರ್ಯೆ ಡಾ. ಶಿವಗಂಗಮ್ಮ, ಉಪನ್ಯಾಸಕರಾದ ರಮೇಶ್ ಪರ್ವತಿ, ವೀರಣ್ಣ ಶೆಟ್ಟರ್, ವಿಶಾಲ್ ಬೆಂಚಳ್ಳಿ, ಭರಮಪ್ಪ, ದಿವಾಕರ್, ಮಂಜುನಾಥ್ ಸಜ್ಜನ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವೀರ ಯೋಧರ ತ್ಯಾಗ, ಬಲಿದಾನಗಳು ಎಂದಿಗೂ ಅಮರ

## ಚನ್ನಗಿರಿ ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ.ಮಧುಕುಮಾರ್



ಚನ್ನಗಿರಿ, ಜು. 27- ಮಾತೃಭೂಮಿಯು ಸಂಕಷ್ಟದಲ್ಲಿದ್ದಾಗ ಸಾವಿಗೂ ಅಂಜದೇ ಹೋರಾಡಿದ ವೀರ ಯೋಧರನ್ನು ಪ್ರತಿಯೊಬ್ಬ ಪ್ರಜೆಯು ಸ್ಮರಿಸಬೇಕಾಗಿದೆ. ಯೋಧರ ತ್ಯಾಗ ಬಲಿದಾನಗಳು ಎಂದೆಂದಿಗೂ ಅಮರ ಎಂದು ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಲ್.ಜಿ.ಮಧುಕುಮಾರ್ ತಿಳಿಸಿದರು. ಬಸವಾಪಟ್ಟಣದ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಗಿಲ್ ವಿಜಯದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

1999 ರ ಪಾಕ್ ವಿರುದ್ದದ ಕಾರ್ಗಿಲ್ ಕದನವು ಭಾರತೀಯ ಮಿಲಿಟರಿ ವ್ಯವಸ್ಥೆಗೆ ಸ್ವಾಭಿಮಾನವನ್ನು ಪ್ರಶ್ನಿಸುವ ಯುದ್ಧವಾಗಿತ್ತು. ನೂರಾರು ಸೈನಿಕರು ಹುತಾತ್ಮರಾಗಿದ್ದರೂ ಅಂಜದೇ ಅಳುಕದೆ ಧೈರ್ಯದಿಂದ ಮುನ್ನುಗ್ಗಿದ ನಮ್ಮ ಯೋಧರುಗಳು ದೇಶದ ಗಡಿಯನ್ನು ಸಂರಕ್ಷಣೆ ಮಾಡಿರುವುದರ ಜೊತೆಗೆ ರಾಷ್ಟ್ರದ ಸೇನಾಶಕ್ತಿಯನ್ನು ವಿಶ್ವಕ್ಕೆ ಅನಾವರಣಗೊಳಿಸಿದ್ದಾರೆ. ತಾಯಿ ನೆಲಕ್ಕೆ ಅರ್ಪಿತವಾದ ವೀರಯೋಧರ ಧೈರ್ಯ, ಸಾಹಸ, ತ್ಯಾಗ ಬಲಿದಾನಗಳು ದೇಶದ ಸಮಗ್ರತೆ, ಸಾರ್ವಭೌಮತೆಗೆ ಧಕ್ಕೆ ಬಂದ ಸಮಯದಲ್ಲಿ ಎಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕು ಎಂಬ ಪಾಠವನ್ನು ಕಲಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಮುಖ್ಯಶಿಕ್ಷಕ ಎಂ. ಶ್ರೀಧರ್, ಶಿಕ್ಷಕರಾದ ಯುವರಾಜ್, ಮಂಜುಳ, ಸುಜಾತ, ಉಮಾಪತಿ, ಶ್ವೇತ, ಗಾಯತ್ರಿ, ದೀಪ ಇದ್ದರು.

# 31ರಂದು ಭದ್ರಾಗೆ ಬಾಗಿನ

ಮಲೇಬೆನ್ನೂರು, ಜು. 27- ಮಧ್ಯ ಕರ್ನಾಟಕದ ಜೀವನಾಡಿ ಭದ್ರಾ ಜಲಾಶಯವು ಮಳೆರಾಯನ ಕೃಪೆಯಿಂದ ಜುಲೈ ತಿಂಗಳಲ್ಲೇ ಭರ್ತಿ ಆಗುತ್ತಿರುವುದರಿಂದ ಹರಿಹರ ತಾ.ನ ಸಮಸ್ತ ಜನತೆ ವತಿಯಿಂದ ಇದೇ ದಿನಾಂಕ 31 ರ ಬುಧವಾರ ಬೆಳಗ್ಗೆ 11-30 ಕ್ಕೆ ಭದ್ರಾ ಜಲಾಶಯಕ್ಕೆ ಬಾಗಿನ ಸಮರ್ಪಣಾ ಕಾರ್ಯಕ್ರಮವನ್ನು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಹರಿಹರ ತಾಲ್ಲೂಕಿನ ರೈತರು, ಕಾಂಗ್ರೆಸ್ ಪಕ್ಷದ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಕಾರ್ಯಕರ್ತರು, ಅಭಿಮಾನಿಗಳು ಅಂದು ಬೆಳಗ್ಗೆ 10 ಗಂಟೆಗೆ ಮಲೇಬೆನ್ನೂರಿನ ನೀರಾವರಿ ಇಲಾಖೆ ಮೈದಾನಕ್ಕೆ ಆಗಮಿಸುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಎಲ್.ಬಿ. ಹನುಮಂತಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಛಲವಾದಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಜಿಲ್ಲಾ ಛಲವಾದಿ ಮಹಾಸಭಾದ ವತಿಯಿಂದ 2023-24 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 75 ರಷ್ಟು ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ. 80 ರಷ್ಟು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಕ್ಕೆ ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್. ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ನಡೆಸಲಾಗುವುದು ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಎನ್. ರುದ್ರಮುನಿ ತಿಳಿಸಿದ್ದಾರೆ.


ಮೈಸೂರಿನ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗೃಹ ಸಚಿವ ಡಾ. ಜಿ.ಪರಮೇಶ್ವರ್ ಕಾರ್ಯಕ್ರಮ ವನ್ನು ಉದ್ಘಾಟಿಸಲಿದ್ದಾರೆ. ಸಮಾಜ ಕಲ್ಯಾಣ ಸಚಿವ ಡಾ.ಹೆಚ್. ಸಿ.ಮಹಾದೇವಪ್ಪ ಬಸವೇಶ್ವರರ ಭಾವಚಿತ್ರಕ್ಕೆ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಂಬೇಡ್ಕರ್ ಭಾವಚಿತ್ರಕ್ಕೆ, ನೆಹರು.ಚ. ಓಲೇಕಾರ್ ಓನಕೆ ಓಬವ್ವ ಭಾವಚಿತ್ರಕ್ಕೆ, ಬಿ. ಬಸವಲಿಂಗಪ್ಪ ಭಾವಚಿತ್ರಕ್ಕೆ ಛಲವಾದಿ ನಾರಾಯಣ ಸ್ವಾಮಿ ಪುಷ್ಪಾರ್ಚನೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಶಾಮನೂರು ಶಿವಶಂಕರಪ್ಪ, ಕೆ.ಎಸ್. ಬಸವಂತಪ್ಪ, ಡಿ.ಜಿ. ಶಾಂತನಗೌಡ, ಬಿ. ಪಿ.ಹರೀಶ್, ಬಿ. ದೇವೇಂದ್ರಪ್ಪ, ಬಸವರಾಜ ವಿ.ಶಿವಗಂಗಾ ಸೇರಿದಂತೆ, ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

# ರಾಣೇಬೆನ್ನೂರಿನಲ್ಲಿ ಇಂದು 'ವಚನ ದರ್ಶನ' ಪುಸ್ತಕ ಲೋಕಾರ್ಪಣೆ

ಪರಿವರ್ತನ ಸಂಸ್ಥೆ ವತಿಯಿಂದ ಇಂದು ಸಂಜೆ 6 ಗಂಟೆಗೆ ವರ್ತಕರ ಸಂಘದ ಸಭಾಭವನದಲ್ಲಿ 'ವಚನ ದರ್ಶನ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಹರಿಹರದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಶಯ ಭಾಷಣ ಮಾಡುವರು. ವರ್ತಕರ ಸಂಘದ ಅಧ್ಯಕ್ಷ ಗದಿಗೆಪ್ಪ ಹೊಟ್ಟಿಗೌಡ್ರ ಅಧ್ಯಕ್ಷತೆ ವಹಿಸುವರು.

**ಶ್ರೀನಿವಾಸ ಎಸ್. ನಿಧನ**



ದಾವಣಗೆರೆ ಕೊಂಡಜ್ಜಿ ರಸ್ತೆ, ವಿಜಯನಗರ ಬಡಾವಣೆ ನಿವಾಸಿ, ಪಾವಗಡ ಸತ್ಯನಾರಾಯಣ ಶೆಟ್ಟಿಯವರ ಪುತ್ರ ಶ್ರೀನಿವಾಸ ಎಸ್. (63) ಅವರು ದಿನಾಂಕ : 27.7.2024ರ ಶನಿವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.7.2024ರ ಭಾನುವಾರ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ಮಧ್ಯಾಹ್ನ 3 ಗಂಟೆಗೆ ನೆರವೇರಿಸಲಾಗುವುದು.

# ಅಪರಿಚಿತನ ಶವ ಪತ್ತೆ

ದಾವಣಗೆರೆ, ಜು. 27 - ಸುಮಾರು 58 ರಿಂದ 60 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಸಾಧಾರಣ ಮೈಕಟ್ಟು, ಕಪ್ಪುಬಿಳಿ ಮಿಶ್ರಿತ ತಲೆ ಕೂದಲು, ಮುಖದ ಮೇಲೆ ಕಪ್ಪುಬಿಳಿ ಮಿಶ್ರಿತ ದಾಡಿ, ಕಪ್ಪು ಟೀ ಶರ್ಟ್, ನೇರಳೆ ಬಣ್ಣದ ಪ್ಯಾಂಟು ಧರಿಸಿದ್ದಾನೆ. ಈತನ ವಾರಸುದಾರರಿದ್ದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಸಂಪರ್ಕಿಸಬಹುದು. ಈತ ವಯೋಸಹಜ ಕಾಯಿಲೆ, ಅಥವಾ ಇನ್ನವುದೋ ಕಾಯಿಲೆಯಿಂದ ಬಳಲಿ, ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಮೃತನ ವಾರಸುದಾರು, ರಕ್ತಸಂಬಂಧಿಗಳ ಪತ್ತೆಗೆ ಮನವಿ ಮಾಡಲಾಗಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂಡಸ್ಟ್ರೀಯಲ್ ಏರಿಯಾ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯನಗರ, ಎಸ್.ಎ. ರವೀಂದ್ರನಾಥ ಬಡಾವಣೆ, ದೂರದರ್ಶನ ಕೇಂದ್ರ, ಮಹಾನಗರ ಪಾಲಿಕೆ ನೀರು ಸರಬರಾಜು ಘಟಕಗಳು, ಸರ್ಕ್ಯೂಟ್ ಹೌಸ್, ಭೂಸೇನಾ ನಿಗಮ, ಜಿಲ್ಲಾ ಪಂಚಾಯತ್ ಕಛೇರಿ, ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ ಭೀಮ ನಗರ, ಕರ್ನಾಟಕ ಬೀಜ ನಿಗಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



# ಗುಳದಹಳ್ಳಿ : ಡೆಂಗ್ಯೂ ಜಾಗೃತಿ ಗ್ರಾಮ

ಮಲೇಬೆನ್ನೂರು, ಜು.27- ಗುಳದಹಳ್ಳಿ ಗ್ರಾಮದಲ್ಲಿ ಶುಕ್ರವಾರ ಆರೋಗ್ಯ ಇಲಾಖೆಯಿಂದ ಡೆಂಗ್ಯೂ ಜಾಗೃತಿ ಕಾಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಟಿಹೆಚ್ಓ ಡಾ.ಅಬ್ದುಲ್ ಖಾದರ್, ಗ್ರಾ.ಪಂ ಅಧ್ಯಕ್ಷ ಹನುಮಂತಪ್ಪ, ತಾ.ಪಂ ಮಾಜಿ ಸದಸ್ಯ ಮಾಲತೇಶ್ , ಗ್ರಾ.ಪಂ ಉಪಾಧ್ಯಕ್ಷರು, ಗ್ರಾ.ಪಂ ಸದಸ್ಯರು, ತಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ, ನಾಗರಾಜ್, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ನವ್ಯ, ಬಿ.ಆದರ್ಶ, ಲಕ್ಷ್ಮಿದೇವಿ, ಇಮ್ರಾನ್, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗುಳದಹಳ್ಳಿಯ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಹರಿಹರದಲ್ಲಿ ನಾಳೆ ಪಿಂಚಣಿದಾರರ ಸಭೆ

ಹರಿಹರ, ಜು. 27 - ಇಲ್ಲಿನ ಪಿ.ಬಿ. ರಸ್ತೆಯ ಮರಿಯಾ ನಿವಾಸ ಶಾಲೆಯಲ್ಲಿ ನಾಡಿದ್ದು ದಿನಾಂಕ 29 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಉದ್ಯೋಗದಾತರು ಮತ್ತು ಉದ್ಯೋಗಿಗಳಿಗೆ, ಪಿಂಚಣಿದಾರರಿಗೆ ಮಧ್ಯಾಹ್ನ 2.30 ರಿಂದ 4 ಗಂಟೆಯವರೆಗೆ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಪ್ರಾದೇಶಿಕ ಭವಿಷ್ಯ ನಿಧಿ ಕಮೀಷನರ್ ತಿಳಿಸಿದ್ದಾರೆ.


**ಶ್ರೀ ವಿ. ವೀರಭದ್ರಪ್ಪನವರು ನಿಧನ**



**ಶ್ರೀ ವೀರಶೆಟ್ಟರ್ ವೀರಭದ್ರಪ್ಪ ನವರು**

(92 ವರ್ಷ) ನಿವೃತ್ತ ಕೃಷಿ ಅಧಿಕಾರಿಗಳು ಮತ್ತು ನಿವೃತ್ತ ನೌಕರರ ವಿವಿಧೋದ್ದೇಶ ಸಹಕಾರ ಸಂಘದ ಮಾಜಿ ಅಧ್ಯಕ್ಷರು,
ಇವರು ದಿನಾಂಕ: 27.07.2024ರ ಶನಿವಾರ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, 3 ಜನ ಗಂಡು ಮಕ್ಕಳು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ: 28.07.2024 ರ ಭಾನುವಾರ ಬೆಳಿಗ್ಗೆ 10.00 ಘಂಟೆಗೆ ಶ್ಯಾಮನೂರು ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು. ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲು ವಿನಂತಿ .

**ದುಃಖತಪ್ತ ಕುಟುಂಬ ವರ್ಗದವರು**
ಫೋ. : 93413 57127, 98864 23980

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**




ಚನ್ನಗಿರಿ ತಾಲ್ಲೂಕು,
ಕತ್ತಲಗೆರೆ ಗ್ರಾಮದ ವಾಸಿ
**ದೇವರಮನೆ ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18.7.2024ನೇ ಗುರುವಾರ ಸಂಜೆ 6.30 ಕ್ಕೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಜಿ. ಮರುಳಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 28.07.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ
ಶ್ರೀ ಗುರು ಗದ್ದಿಗೇಶ್ವರ ಸ್ವಾಮಿ ಸಮುದಾಯ ಭವನ, ಕತ್ತಲಗೆರೆ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು : ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ದೇವರಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು, ಕತ್ತಲಗೆರೆ. ಮೊ. 77609-80540**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

**ಪ್ರಥಮ ಪುಣ್ಯಸ್ಮರಣೆ**




**ಲಿಂ. ಶ್ರೀ ನಾಗಭೂಷಣ ಎ.ಹೆಚ್.**

ನೀವು ನಮ್ಮನ್ನಗಲಿ
ಒಂದು ವರ್ಷವಾಯಿತು.
ನಿಮ್ಮ ನೆನಪು ಸದಾ ನಮ್ಮ
ಹೃದಯದಲ್ಲಿ ಅಚ್ಚಳಿಯದೇ
ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು
ಚಿರಶಾಂತಿ ಕೊಡಲೆಂದು
ಪ್ರಾರ್ಥಿಸುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ.

**ಪತ್ನಿ : ಶ್ರೀಮತಿ ಪುಷ್ಪ ಕೋಂ ನಾಗಭೂಷಣ್ ಎ.ಹೆಚ್.**
#1724/10, ಚಂದ್ರೋದಯ ಮಿಲ್ ಮುಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.

**11ನೇ ವರ್ಷದ ಪುಣ್ಯಸ್ಮರಣೆ**



**ದಿ|| ಬಿ.ಜಿ. ಶಕುಂತಲಮ್ಮ**
ಮರಣ : 28.07.2013

**ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ**

**ಪತಿ : ಬಿ.ಜಿ. ಮರುಳಸಿದ್ದನಗೌಡ**
ಬಿ.ಇ.ಓ.(ನಿ) ಹಾಗೂ ಮಾಜಿ ಅಧ್ಯಕ್ಷರು, ನಿ. ಸರ್ಕಾರಿ ನೌಕರರ ಸಂಘ (ರಿ.) ದಾವಣಗೆರೆ.
**ಶ್ರೀಮತಿ ಮಂಜುಳಾ ದಯಾನಂದ ಬಿ. ಅರಳಿ**
**ಶಾಂತಲಾ ಬಿ. ಪ್ರಕಾಶ್, ಕೋಮಲ ಬಿ. ಪ್ರಸನ್ನ,**
ಮೊಮ್ಮಕ್ಕಳಾದ : ಡಾ|| ದೀಕ್ಷಾ, ಭೂಮಿಕಾ, ಶಶಾಂಕ್, ರಿಷಿಕ, ಋತ್ವಿಕ, ನೈನಿಕಾ

# ವಾರ ಭವಿಷ್ಯ

**ದಿನಾಂಕ : 28.07.2024 ರಿಂದ 03.08.2024ರ ವರೆಗೆ**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೈಗೊಂಡಿರುವ ಯೋಜನೆಗಳು ಯಶಸ್ವಿಯಾಗಿ ಮುನ್ನಡೆಯುವವಾದಾದರೂ ಅದಕ್ಕೆ ಬೇಕಾಗಿರುವ ಸಿದ್ಧತೆಗಳು ಉತ್ತಮವಾಗಿರುವುದು ಮೇಲು. ನೀವು ಮಾಡಲಿರುವ ಸಮಾಜಸೇವೆಯಿಂದಾಗಿ ಗೌರವ ಸಂದಾಯವಾಗಲಿದೆ, ಸರ್ಕಾರೀ ನೌಕರರು ತಮ್ಮ ಪದೋನ್ನತಿಗಾಗಿ ಮಂತ್ರಿಮಹೋದಯರ ಮರ್ಜಿಹಿಡಿಯುವರು, ಹಳೇ ಕಾಯಿಲೆ ಬಗ್ಗೆ ಅಲಕ್ಷೆ ಸಲ್ಲದು, ಹಿರಿಯರು ತಮ್ಮ ಊಟೋಪಚಾರ ವಿಷಯದಲ್ಲಿ ಜಾಗರೂಕರಾಗಿರುವುದು ಉತ್ತಮ. ಕೃಷಿಕ ಮಿತ್ರರಿಗೆ ಮಧ್ಯಸ್ಥರದ ಲಾಭವಾಗಲಿದೆ. ಗೋ ಸೇವೆ ಮಾಡಿ. ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಮತ್ತೊಬ್ಬರಿಗೆ ಕೊಟ್ಟ ಜವಾಬ್ದಾರಿಯಿಂದಾಗಿ ನೀವು ಒತ್ತಡವನ್ನು ಅನುಭವಿಸಬೇಕಾದೀತು, ಜೊತೆಗೆ ಸೋದರನ ನೌಕರಿಯಲ್ಲೂ ತುಸು ಕಿರಿಕಿರಿ ಕಂಡುಬರಲಿದೆ, ಆಸ್ತಿ ಕೊಳ್ಳುವ ಅಥವಾ ಹೊಸ ಮನೆ ಕಟ್ಟುವ ವಿಷಯದಲ್ಲಿ ಹೆಚ್ಚಿನ ವಿಳಂಬ ಕಾಣಲಿದೆ, ಅಲಂಕಾರಿಕ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ವಹಿವಾಟಿನಿಂದಾಗಿ ಆದಾಯ ದ್ವಿಗುಣಗೊಳ್ಳಲಿದೆ, ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಗಳು ಕಾರಣಾಂತರದಿಂದ ಮುಂದೆ ಹೋಗುವ ಸಂಭವವಿದೆ, ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಗುರುಗಳ ದರ್ಶನ ಮಾಡಿ. ಭಾನು-ಸೋಮ-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಅಸಾಧ್ಯವಾದ ಕೆಲಸಗಳೂ ಕೂಡ ಸುಲಭವಾಗಿ ನೆರವೇರಲಿವೆ, ವ್ಯವಹಾರದಲ್ಲಿ ನಿಮ್ಮ ಮಾತಿಗೆ ಬೆಲೆ ಬರಲಿದೆ, ಆದಾಯವು ನಿರೀಕ್ಷಿತ ಮಟ್ಟಕ್ಕಿಂತ ಉತ್ತಮವಾಗಿದ್ದು, ಇದರಿಂದಾಗಿ ಅನೇಕ ಹಣಕಾಸಿನ ಸಮಸ್ಯೆಗಳು ಬಗೆಹರಿಯಲಿವೆ, ಮಂತ್ರಿ ಮಹೋದಯರ ಮಾತುಗಳಿಗೆ ಪಕ್ಷದ ವರಿಷ್ಠರ ಮಟ್ಟದಲ್ಲಿ ಮನ್ನಣೆ ಸಿಗಲಿದೆ, ಹಲವರಿಗೆ ಸಮಾಜದಲ್ಲಿ ಮಾನ-ಸನ್ಮಾನಗಳು ನಡೆಯಲಿವೆ, ಹಳೆಯ ಮಿತ್ರರ ಭೇಟಿ ಮುದ ನೀಡಲಿದೆ, ಬಂಧುಗಳ ಮನೆಯಲ್ಲಿ ನಡೆಯಲಿರುವ ಶುಭ ಕಾರ್ಯದಲ್ಲಿ ಪರಿವಾರದೊಂದಿಗೆ ಹೋಗಿ ಭಾಗವಹಿಸುವಿರಿ. ಮಂಗಳ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಈ ವಾರದ ಆರಂಭ ಅಷ್ಟು ಶುಭದಾಯಕವಲ್ಲದಿದ್ದರೂ ಮಧ್ಯಂತರದಲ್ಲಿ ಉತ್ತಮವಾಗಿ ಪರಿಣಮಿಸಲಿದೆ, ಭೂಮಿಗೆ ಸಂಬಂಧಿಸಿದ ವ್ಯವಹಾರದಲ್ಲಿ ತುಸು ಜಾಗ್ರತ ರಾಗಿರುವುದು ಮೇಲು. ರೈತಾಪಿ ಮಿತ್ರರಿಗೆ ಬೇಸಾಯದಿಂದ ಹೆಚ್ಚಿನ ಲಾಭ ವಾಗಲಿದೆ, ಬರಬೇಕಾಗಿರುವ ಬಾಕಿ ಹಣ ಸಕಾಲದಲ್ಲಿ ಸಂದಾಯವಾಗಲಿದೆ, ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನಿರೀಕ್ಷಿಸುವವರಾಗಿದ್ದಲ್ಲಿ ಹೆಚ್ಚಿನ ಪರಿಶ್ರಮ ಪಡದೆ ವಿಧಿಯಿಲ್ಲ. ಅಪರಿಚಿತರೊಂದಿಗೆ ಮಾಡಲಿರುವ ಹಣಕಾಸಿನ ವ್ಯವಹಾರ ನಷ್ಟಕ್ಕೆ ಕಾರಣವಾದೀತು, ಸ್ನೇಹಿತರು ಕೊಡಲಿರುವ ಸಲಹೆ-ಸೂಚನೆಗಳು ಉಪಯೋಗವಾಗಲಿವೆ ಸೋಮ-ಬುಧ-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮಧ್ಯಮ ಮಟ್ಟದ ವಿದ್ಯಾರ್ಥಿಗಳು ತಮ್ಮ ಭವಿಷ್ಯಕ್ಕೋಸ್ಕರ ಹರಸಾಹಸ ಪಡುವರು. ವೃತ್ತಿಪರತೆಯಲ್ಲಿ ತುಸು ಕೊರತೆ ಕಾಣಲಿದೆ, ಇದನ್ನು ಆದಷ್ಟು ಬೇಗ ಸರಿಪಡಿಕೊಳ್ಳುವುದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು, ಆದಾಯದ ಮಧ್ಯಗತಿಯಲ್ಲಿರುವುದರಿಂದ ಹೆಚ್ಚಿನ ನಿರೀಕ್ಷೆಬೇಡ. ಖಾಸಗಿ ಕಂಪನಿಯಲ್ಲಿರುವ ಉನ್ನತಾಧಿಕಾರಿಗಳಿಗೆ ಪದೋನ್ನತಿಯಾಗಲಿದೆ, ಜೊತೆಗೆ ವೇತನದಲ್ಲೂ ಹೆಚ್ಚಳವಾಗಲಿದೆ, ಮನೆಯಲ್ಲಿ ಹಿರಿಯರೊಂದಿಗೆ ಯಾವುದೇ ಕಾರಣಕ್ಕೂ ಮನಸ್ತಾಪ ಮಾಡಿಕೊಳ್ಳಬೇಡಿ, ತೀರ್ಥಯಾತ್ರೆ ಯೋಗವಿದೆ. ಭಾನು-ಮಂಗಳ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಆದಾಯವು ಅಗತ್ಯಕ್ಕೆ ತಕ್ಕಂತೆ ಮಾತ್ರ ಇರುವುದರಿಂದ ಉಳಿತಾಯದ ಯೋಚನೆ ಬೇಡ, ಆರಂಭದಲ್ಲಿ ವೇಗ ಪಡೆದಿದ್ದ ಕೆಲಸ ಕಾರ್ಯಗಳು ಇದ್ದಕ್ಕಿದ್ದಂತೆ ಕುಂಠಿತಗೊಳ್ಳಲಿವೆ, ಆದ್ದರಿಂದ ಮುನ್ನೆಚ್ಚರಿಕೆಯಲ್ಲಿರುವುದು ಮೇಲು, ಹಂಗಾಮಿ ಕೆಲಸದಲ್ಲಿರುವವರಿಗೆ ಇಷ್ಟರಲ್ಲೇ ಶುಭ ಸಮಾಚಾರವೊಂದು ಕೇಳಿ ಬರಲಿದೆ, ಮನೆಯಲ್ಲಿ ಕಿರಿಯರ ಸಂಬಂಧಿ ಹಲವು ಮಾತಿನ ಚಕಮಕಿ ನಡೆಯಬಹುದು, ಸಾಕು ಪ್ರಾಣಿಗಳಿಂದ ಚಿಕ್ಕಮಕ್ಕಳಿಗೆ ಅಪಾಯವಾಗುವ ಪ್ರಸಂಗ ಬರಲಿದೆ, ಪಾಲುದಾರಿಕೆ ವ್ಯವಹಾರದಲ್ಲಿ ಸಾಕಷ್ಟು ಲಾಭವಾಗಲಿದೆ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ದೈನಂದಿನ ಬದುಕಿನಲ್ಲಿ ಬರುತ್ತಿರುವ ಹತ್ತು ಹಲವು ಸಮಸ್ಯೆಗಳಿಂದಾಗಿ ಮನಸ್ಸು ಹತೋಟಿ ಮೀರಬಹುದು, ತಾಳ್ಮೆಯಿಂದ ವರ್ತಿಸುವುದು ಮೇಲು, ಮುಂದಾಲೋಚನೆ ಯಿಂದ ಕೆಲಸ ಮಾಡಿದಲ್ಲಿ ತುಸು ಲಾಭದಾಯಕವಾಗಲಿದೆ. ರಕ್ತದೊತ್ತಡ ಅಥವಾ ಹೃದಯಸಂಬಂಧಿ ಕಾಯಿಲೆ ಇರುವವರು ಸಾಕಷ್ಟು ಎಚ್ಚರದಿಂದಿರುವುದು ಒಳಿತು ದುರ್ಗಾರಾಧನೆಯೊಂದಿಗೆ ಕುಲದೇವತಾರಾಧನೆ ಮಾಡಿರಿ, ಆದಾಯದಲ್ಲಿ ಕ್ರಮೇಣ ಹೆಚ್ಚಳ ಕಂಡು ಬರಲಿದೆ, ಸಾಧು ಸಂತರ ದರ್ಶನ ಮಾಡಿರಿ. ಗೋಗ್ರಾಸ ಕೊಡಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ದೈನಂದಿನ ಬದುಕಿಗೆ ಬೇಕಾಗುವಷ್ಟು ಆದಾಯವಿರುವುದರಿಂದ ಚಿಂತೆ ಬೇಡ, ಆಸ್ತಿ ಖರೀದಿ ವಿಚಾರವನ್ನು ಕೆಲಕಾಲ ಮುಂದೂಡುವುದು ಮೇಲು, ಸಂಬಂಧಪಟ್ಟ ದಾಖಲೆಗಳನ್ನು ಎರಡೆರೆಡು ಬಾರಿ ಪರಿಶೀಲಿಸುವುದು ಉತ್ತಮ, ಉನ್ನತಾಧ್ಯಯನಕ್ಕೆ ವಿದೇಶದಲ್ಲಿ ವಿಫುಲಾವಕಾಶ ಸಿಗಲಿದೆ. ಅದನ್ನು ಸದುಪಯೋಗ ಪಡಿಸಿಕೊಳ್ಳುವುದು ಮೇಲು. ಕೆಲಸ ಕಾರ್ಯಗಳ ಒತ್ತಡದಲ್ಲಿ ಕೌಟುಂಬಿಕ ಹಿತವನ್ನು ಕಡೆಗಣಿಸುವುದರಿಂದ ಮನೆಯಲ್ಲಿ ಅಹಿತಕರ ಘಟನೆಗಳು ನಡೆಯುವ ಸಂಭವವಿದೆ. ಅನ್ನದಾನ ಉತ್ತಮ.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಇಷ್ಟು ದಿನ ನಿರೀಕ್ಷೆ ಮಾಡುತ್ತಿದ್ದ ಕಾರ್ಯವೊಂದು ಈ ವಾರ ಕೈಗೂಡಲಿದೆ. ಮಡದಿ, ಮಕ್ಕಳ ಬಹುತೇಕ ಬೇಡಿಕೆಗಳು ಈಡೇರಲಿವೆ, ವಿದ್ಯಾರ್ಥಿಗಳ ವೃತ್ತಿಪರ ಬೇಡಿಕೆಗಳು ಈಡೇರಲಿವೆ, ಸರ್ಕಾರೀ ನೌಕರರು ತಮ್ಮ ವೃತ್ತಿಪರತೆಯನ್ನು ಕಾಪಾಡಿಕೊಳ್ಳುವುದು ಲೇಸು. ಸಮಯದ ಸದುಪಯೋಗವನ್ನು ವ್ಯರ್ಥಗೊಳಿಸಬೇಡಿ, ನ್ಯಾಯವಾದಿಗಳು ತಮ್ಮ ಕಕ್ಷಿದಾರರಿಗೆ ನ್ಯಾಯವೊದಗಿಸಿ ಕೊಡಲು ಶಕ್ತಿಮೀರಿ ಯತ್ನಿಸುವರು, ಸಿದ್ಧ ಪದಾರ್ಥಗಳ ತಯಾರಕರಿಗೆ ವಹಿವಾಟು ಹೆಚ್ಚಲಿದೆ, ಹೂವು, ಹಣ್ಣಿನ ವ್ಯಾಪಾರಿಗಳಿಗೆ ಲಾಭ ಹೆಚ್ಚಲಿದೆ. ಸೊಮ-ಗುರು-ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕಳೆದ ವಾರವೆಲ್ಲಾ ಶ್ರಮಪಟ್ಟ ನಿಮಗೆ ಅದರ ಫಲ ಈ ವಾರ ಸಂಪೂರ್ಣವಾಗಿ ಸಿಗಲಿದೆ, ಪದೇಪದೇ ಬದಲಾದ ನಿರ್ಧಾರಗಳಿಂದಾಗಿ ತುಂಬಾ ನಷ್ಟವನ್ನು ಅನುಭವಿಸ ಬೇಕಾದಿತು. ಆದಾಯವು ಮಧ್ಯಸ್ಥರದಲ್ಲಿರುವುದರಿಂದ ಗೃಹಿಣಿಯರು ಮನೆ ವಾರ್ತೆಯನ್ನು ಜಾಣತನದಿಂದ ನಿಭಾಯಿಸಬೇಕಾದೀತು, ಮಿತ್ರರಷ್ಟೇ ಶತ್ರುಗಳು ನಿಮಗಿರುವುದರಿಂದ ಅವರ ಬಗ್ಗೆ ಜಾಗ್ರತರಾಗಿರುವುದು ಮೇಲು. ಹಿರಿಯರು ಕೊಡಲಿರುವ ಹಲವು ಸಲಹೆ, ಸೂಚನೆಗಳು ಮುಂದೆ ನಿಮ್ಮ ಪ್ರಯೋಜನಕ್ಕೆ ಬರಲಿವೆ. ಬುಧ-ಶುಕ್ರ-ಶನಿ-ಶುಭ ದಿನಗಳು

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ವಿದೇಶದಲ್ಲಿ ಕೆಲಸ ಮಾಡುವವರಿಗೆ ಅಥವಾ ಉದ್ಯಮಿಗಳಿಗೆ ಆದಾಯದ ಮೂಲದಲ್ಲಿ ಸಾಕಷ್ಟು ಹೆಚ್ಚಳವಾಗುವುದರಿಂದ ಉಳಿತಾಯದ ಜೊತೆಗೆ ಬಡ ವಿದ್ಯಾರ್ಥಿ ಗಳಿಗೆ ನೆರವಾಗುವುದು ಮೇಲು, ಭಿನ್ನಾಭಿಪ್ರಾಯ ಮೂಡಿರುವ ಕುಟುಂಬವನ್ನು ಒಗ್ಗೂಡಿಸಲು ಮನೆಯ ಹಿರಿಯರು ಬಹಳ ಕಷ್ಟಪಡುವರು ಮತ್ತು ಅದರಲ್ಲಿ ಸಫಲರಾಗುವರು, ಗುಪ್ತರೋಗಿಗಳು ಸಕಾಲದಲ್ಲಿ ಚಿಕಿತ್ಸೆ ಪಡೆಯುವುದು ಮೇಲು, ಗುರುಗಳನ್ನು ಆರಾಧಿಸಿ. ಭಾನು-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮೇಲಾಧಿಕಾರಿಗಳ ದ್ವಿಮುಖ ನೀತಿಯಿಂದಾಗಿ ನೌಕರರು ಗೊಂದಲಕ್ಕೊಳಗಾಗು ವರು, ಬಹಳ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವುದು ಉತ್ತಮ. ಆದಾಯವು ಮಧ್ಯಸ್ಥರದಲ್ಲಿರುವುದರಿಂದ ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಮೇಲು. ಕಬ್ಬಿಣದ ವ್ಯಾಪಾರಿಗಳಿಗೆ ಲಾಭ ಹೆಚ್ಚಾಗುವುದು. ಪರ ಸ್ತ್ರಿ ವಿಚಾರದಲ್ಲಿ ನಿಮ್ಮ ಪ್ರವೇಶ ಬೇಡ. ಮನೆಯಲ್ಲಿ ನಡೆಯಲಿರುವ ಶುಭ ಕಾರ್ಯಕ್ಕೆ ನಿಮ್ಮಿಂದ ಹೆಚ್ಚಿನ ದೇಣಿಗೆ ಸಂದಾಯವಾಗಲಿದೆ, ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರಲಿದೆ. ಸೋಮ-ಬುಧ-ಗುರು-ಶುಭ ದಿನಗಳು.

## ನೀತಿ ಸಭೆಗೆ 10 ಪ್ರತಿನಿಧಿಗಳು ಗೈರು

ನವದೆಹಲಿ, ಜು. 27 - ನೀತಿ ಆಯೋಗದ ಒಂಭತ್ತನೇ ಆಡಳಿತ ಮಂಡಳಿ ಸಭೆಗೆ 10 ರಾಜ್ಯಗಳು ಹಾಗೂ ಕೇಂದ್ರಾಡಳಿತದ ಪ್ರದೇಶಗಳ ಪ್ರತಿನಿಧಿಗಳು ಗೈರಾಗಿದ್ದರು ಎಂದು ನೀತಿ ಆಯೋಗದ ಸಿಇಒ ಬಿ.ವಿ. ಆರ್. ಸುಬ್ರಮಣ್ಯಂ ಹೇಳಿದ್ದಾರೆ.

ಸಭೆಯಲ್ಲಿ 26 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕ ಸೇರಿದಂತೆ ವಿಪಕ್ಷಗಳ ಆಡಳಿತ ಇರುವ ರಾಜ್ಯಗಳ ಪ್ರತಿನಿಧಿಗಳು ಗೈರಾಗಿದ್ದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಭೆಯಿಂದ ಅರ್ಧದಲ್ಲೇ ಹೊರನಡೆದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಸುಬ್ರಹ್ಮಣ್ಯಂ, ಮಮತಾ ಕೇಳಿದಂತೆ ಅವರ ಸರದಿ ಬರುವುದಕ್ಕೆ ಮೊದಲೇ ಮಾತನಾಡಲು ಅವಕಾಶ ನೀಡಲಾಗಿತ್ತು ಎಂದರು.

ಅವರು ತಮ್ಮ ಸಮಯ ಪೂರ್ಣಗೊಳ್ಳುವವರೆಗೂ ಮಾತನಾಡಿದರು. ನಂತರ ಸಚಿವ ರಾಜನಾಥ್ ಸಿಂಗ್ ಅವರು ಸಮಯ ಮುಗಿದ ಬಗ್ಗೆ ಸೂಚಿಸಿದರು. ಇಷ್ಟಕ್ಕೆ ಮಮತಾ ಬ್ಯಾನರ್ಜಿ ಸಭೆಯಿಂದ ಹೊರ ನಡೆದರು ಎಂದು ತಿಳಿಸಿದರು.

## ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ನಿಟ್ಟೂರಿನ ಪಾರ್ವತಮ್ಮ






ಮಲೇಬೆನ್ನೂರು, ಜು. 27- ಲಯನ್ಸ್ ಕ್ಲಬ್ ನ 2024-25 ನೇ ಸಾಲಿನ ಅಧ್ಯಕ್ಷರಾಗಿ ನಿಟ್ಟೂರಿನ ಶ್ರೀಮತಿ ಪಾರ್ವತಮ್ಮ ಇ.ಎಂ. ಮರುಳಸಿದ್ದೇಶ್, ಕಾರ್ಯದರ್ಶಿಯಾಗಿ ನಿಟ್ಟೂರಿನ ಶ್ರೀಮತಿ ರೂಪ ಪಾಟೀಲ್ ಮತ್ತು ಖಜಾಂಚಿಯಾಗಿ ಮಲೇಬೆನ್ನೂರಿನ ಶ್ರೀಮತಿ ರೋಹಿಣಿ ಬಿ.ಎಂ. ಜಗದೀಶ್ವರಸ್ವಾಮಿ ಅವರು ಆಯ್ಕೆಯಾಗಿದ್ದಾರೆ.

**ಇಂದು ಪದಗ್ರಹಣ :** ಲಯನ್ಸ್ ಭವನದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ. ಬೆಳ್ಳೂಡಿ ಶಿವಕುಮಾರ್ ಅವರು ನೂತನ ತಂಡವನ್ನು ಪ್ರತಿಷ್ಠಾಪಿಸಲಿದ್ದು, ಡಾ. ಜಿ. ಶಿವಲಿಂಗಪ್ಪ, ಡಾ.ಬಿ.ಎಸ್. ನಾಗಪ್ರಕಾಶ್, ಡಾ ಟಿ ಬಸವರಾಜ್, ಹೆಚ್.ಎನ್. ಶಿವಕುಮಾರ್, ವೈ.ಬಿ. ಸತೀಶ್, ಎಸ್.ಜಿ. ಉಳುವಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ಕಥೆ ಹೇಳುವವರಿಂದಲೇ ಸೈಬರ್ ಅಪರಾಧ!



**ಸೈಬರ್ ವಂಚಕರಲ್ಲಿ ಪದವೀಧರರಿಗಿಂತ ನಯವಂಚನೆಯಿಂದ ನಂಬಿಸುವ ಕಡಿಮೆ ಕಲಿತವರೇ ಹೆಚ್ಚು**

ನವದೆಹಲಿ, ಜು. 27 - ಸೈಬರ್ ವಲಯದಲ್ಲಿ ಅಪರಾಧ ನಡೆಸುವುದು ಸಂಕೀರ್ಣ ವಿಷಯ. ಆದರೆ, ಈ ವಲಯದಲ್ಲಿ ವಂಚನೆ ನಡೆಸುವವರು ತಾಂತ್ರಿಕವಾಗಿ ಹೆಚ್ಚು ತಿಳಿದು ಕೊಳ್ಳುವುದಕ್ಕಿಂತ, ಅಮಾಯಕರಿಗೆ ಕಥೆ ಹೇಳುವುದನ್ನೇ ಚೆನ್ನಾಗಿ ಕಲಿತಿರುತ್ತಾರೆ ಸೈಬರ್ ವಲಯದ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿರುವ ದೆಹಲಿ ಪೊಲೀಸರ ಸೈಬರ್ ಅಪರಾಧ ವಿಭಾಗದ ಡಿಸಿಪಿ ಹೇಮಂತ್ ತಿವಾರಿ, ಸೈಬರ್ ಅಪರಾಧ ಎಸಗುವವರು ಉನ್ನತ ಶಿಕ್ಷಣ ಪಡೆದಿರುವುದಿಲ್ಲ. ಇದಕ್ಕಿಂತ ಕಥೆ ಹೇಳುವ ಮೂಲಕವೇ ಅಮಾಯಕರನ್ನು ಬಲೆಗೆ ಬೀಳಿಸುತ್ತಾರೆ ಎಂದು ಹೇಳಿದ್ದಾರೆ.

ಸೈಬರ್ ಅಪರಾಧದಲ್ಲಿ ತೊಡಗಿರುವ ಸಾಕಷ್ಟು ಜನರು ಇಂಜಿನಿಯರಿಂಗ್ ರೀತಿಯ ಪದವೀಧರರೇನೂ ಅಲ್ಲ. ಇವರಲ್ಲಿ ಹೆಚ್ಚಿನವರು 10 ಇಲ್ಲವೇ 12ನೇ ತರಗತಿ ಉತ್ತೀರ್ಣರಾಗಿರುತ್ತಾರೆ ಎಂದು ತಿವಾರಿ ಹೇಳುತ್ತಾರೆ.

ಇವರು ಎಷ್ಟರಮಟ್ಟಿಗೆ ಮಂಕುಬೂದಿ ಎರಚುತ್ತಾರೆ ಎಂದರೆ ವಂಚನೆಗೆ ಒಳಗಾದವರು ಪೊಲೀಸರಿಗೆ ಮಾಹಿತಿ ನೀಡುವ ಬದಲು ಮತ್ತೆ, ವಂಚಕರಿಂದಲೇ ಸಲಹೆ ಪಡೆಯುತ್ತಾರೆ ಎಂದು ಪೊಲೀಸ್ ಅಧಿಕಾರಿ ಹೇಳುತ್ತಾರೆ.

ನಾವು ಒಂದು ಸೈಬರ್ ವಂಚನೆ ಪ್ರಕರಣವೊಂದನ್ನು ಬಯಲಿಗೆಳೆದು ಆರೋಪಿಯನ್ನು ಬಂಧಿಸಿದ್ದೆವು. ಆತ ಪಶ್ಚಿಮ ಬಂಗಾಳದ ಹಿರಿಯ ಮಹಿಳೆಯೊಬ್ಬರನ್ನು ವಂಚಿಸುವ ಪ್ರಯತ್ನದಲ್ಲಿದ್ದ. ಆಗ ನಾವು ಮಹಿಳೆಗೆ ಕರೆ ಮಾಡಿ ನಿಮಗೆ ವಂಚನೆ ಮಾಡಲು ಬಂದಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದೆವು. ನಮ್ಮ ಅಧಿಕಾರಿ ಈ ಸೂಚನೆ ನೀಡಿ ಕರೆ ಕಟ್ ಮಾಡಿದ ತಕ್ಷಣವೇ, ಆ ಮಹಿಳೆ ವಂಚಕನಿಗೇ ಕರೆ ಮಾಡಿ ಯಾರೋ ಪೊಲೀಸರ ಸೋಗಿನಲ್ಲಿ ನನ್ನ ವಂಚನೆಗೆ ಪ್ರಯತ್ನ ನಡೆಸಲಾಗುತ್ತಿದೆ ಎಂದು ಹೇಳಿದ್ದರು! ಅಷ್ಟರಮಟ್ಟಿಗೆ ವಂಚಕರು ಮಂಕು ಬೂದಿ ಎರಚಿರುತ್ತಾರೆ ಎಂದು ತಿವಾರಿ ಹೇಳಿದ್ದಾರೆ.

ವಂಚನೆಗೆ ಸಿಲುಕುವವರಲ್ಲಿ ಬಹುತೇಕರು ಮಧ್ಯ ವಯಸ್ಸಿನ ಮಹಿಳೆ ಇಲ್ಲವೇ ಪುರುಷರಾಗಿರುತ್ತಾರೆ. ಸ್ಥಿತಿವಂತರು, ವಿವಾಹ ಸಂಬಂಧದ ವೆಬ್ ತಾಣಗಳಲ್ಲಿ ಸಂಗಾತಿ ಹುಡುಕುವವರು ಹಾಗೂ ಹೂಡಿಕೆಯಲ್ಲಿ ಆಸಕ್ತಿ ಹೊಂದಿರುವವರನ್ನೇ ಸೈಬರ್ ವಂಚಕರು ಪ್ರಮುಖವಾಗಿ ಆಯ್ಕೆ ಮಾಡುತ್ತಾರೆ

50 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು ಒಂಟಿಯಾಗಿದ್ದ ಸಂದರ್ಭದಲ್ಲಿ ಡಿಜಿಟಲ್ ಬಂಧನಕ್ಕೆ ಒಳಪಡಿಸುವ ಘಟನೆಗಳು ಹೆಚ್ಚಾಗುತ್ತಿವೆ. ಸಿಬಿಐ ಮತ್ತಿತರೆ ಅಧಿಕಾರಿಗಳ ಸೋಗಿನಲ್ಲಿ ವಂಚಕರು ಡಿಜಿಟಲ್ ಅರೆಸ್ಟ್ ಮಾಡಲಾಗಿದೆ ಎಂದು ಬೆದರಿಸುತ್ತಾರೆ.

ನೀವು ಕಳ್ಳಸಾಗಣೆಯಲ್ಲಿ ಸಿಲುಕಿದ್ದೀರಾ ಎಂದೋ ಇಲ್ಲವೇ ನಿಮ್ಮ ಬ್ಯಾಂಕ್ ಖಾತೆಯನ್ನು ಅಕ್ರಮ ಹಣಕ್ಕಾಗಿ ಬಳಸಲಾಗಿದೆ ಎಂದೋ ಹೆದರಿಸಲಾಗುತ್ತದೆ. ನಂತರ, ನೀವು ಬೇರೆ ಯಾರನ್ನೂ ಸಂಪರ್ಕಿಸುವಂತಿಲ್ಲ ಇದ್ದಲ್ಲೇ ಇರಬೇಕು ಎಂದು ಹೇಳಲಾಗುತ್ತದೆ. ತನಿಖೆಗೆ ಒಳಗಾಗುತ್ತಿರುವುದಾಗಿ ಸಂತ್ರಸ್ತರು ವಿಡಿಯೋ ಎದುರೇ ಕುಳಿತಿರುತ್ತಾರೆ. ಈ ರೀತಿ ಹೆದರಿಸಿದ ನಂತರ ಅಮಾಯಕರಿಂದ ಹಣ ಪಡೆಯುತ್ತಾರೆ.

ಸಾಮಾಜಿಕ ಜಾಲ ತಾಣಗಳು ಮತ್ತು ಆನ್‌ಲೈನ್ ಮೂಲಕ ಸಿಗುವ ಮಾಹಿತಿಯನ್ನು ಸಂಗ್ರಹಿಸಿ ದಾಳಿ ನಡೆಸುತ್ತಿದ್ದಾರೆ. ಸುಶಿಕ್ಷಿತ, ಉತ್ತಮ ಹಣಕಾಸು ಹಿನ್ನೆಲೆ ಹೊಂದಿರುವವರು ಹಾಗೂ ಹೂಡಿಕೆಯಲ್ಲಿ ಆಸಕ್ತಿ ಹೊಂದಿರುವವರನ್ನೇ ಬಲಿಪಶು ಮಾಡಿಕೊಳ್ಳಲಾಗುತ್ತಿದೆ.

ಪ್ರತಿದಿನ ಏಳುನೂರು ಜನರು ದೆಹಲಿ ಒಂದರಲ್ಲಿ ಸೈಬರ್ ಅಪರಾಧಕ್ಕೆ ಗುರಿಯಾಗುತ್ತಿದ್ದಾರೆ. ಸಾಕಷ್ಟು ಪ್ರಕರಣಗಳಲ್ಲಿ ಅಮಾಯಕತೆ, ದುರಾಸೆ ಇಲ್ಲವೇ ಹೆದರಿಕೆಯಿಂದಾಗಿ ಜನರು ಸೈಬರ್ ಅಪರಾಧಕ್ಕೆ ಬಲಿಯಾಗುತ್ತಿದ್ದಾರೆ.

ಸೈಬರ್ ಅಪರಾಧಿಗಳ ಕರಾಳ ಜಾಲ ಈಗ ದೇಶಾದ್ಯಂತ ಹರಡುತ್ತಿದೆ. ಇವರು ಒಂದು ರಾಜ್ಯದಲ್ಲಿ ಬ್ಯಾಂಕ್ ಖಾತೆ ತೆರೆದರೆ ಮತ್ತೊಂದು ರಾಜ್ಯದಲ್ಲಿ ಸಿಮ್ ಕಾರ್ಡ್ ಪಡೆಯುತ್ತಿದ್ದಾರೆ.

ಈ ಹಿಂದೆ ಹೆಚ್ಚಿನ ಸೈಬರ್ ಅಪರಾಧಗಳು ಜಾರ್ಖಂಡ್‌ನ ಜಮ್ತಾರಾ ಇಲ್ಲವೇ ಮೇವತ್ ವಲಯಗಳಿಂದ ನಡೆಯುತ್ತಿದ್ದವು. ಈಗ ಸೈಬರ್ ಅಪರಾಧಗಳ ಹೊಸ ಹೊಸ ಕೇಂದ್ರಗಳು ಹುಟ್ಟಿಕೊಳ್ಳುತ್ತಿವೆ. ಈ ರೀತಿಯ 15 ತಾಣಗಳನ್ನು ಇದುವರೆಗೂ ಗುರುತಿಸಲಾಗಿದೆ.

ಮಧ್ಯಪ್ರದೇಶದ ಜಬಲ್ಪುರ ಹಾಗೂ ಮಾಳ್ವಗಳಿಂದ ಸೈಬರ್ ಅಪರಾಧ ಹೆಚ್ಚಾಗುತ್ತಿದೆ. ದಕ್ಷಿಣ ಭಾರತದಲ್ಲೂ ಸೈಬರ್ ಅಪರಾಧಗಳ ಕೆಲ ತಾಣಗಳು ಹುಟ್ಟಿಕೊಳ್ಳುತ್ತಿವೆ. ಅಸ್ಸಾಂ ಹಾಗೂ ಪಶ್ಚಿಮ ಬಂಗಾಳಗಳು ವಂಚನೆಯ ಕರೆಗಾಗಿ ಸಗಟು ಸಿಮ್ ಕಾರ್ಡ್ ಖರೀದಿಸುವ ತಾಣಗಳಾಗುತ್ತಿವೆ.

## ಫೋಟೋಗ್ರಫಿ, ವಿಡಿಯೋಗ್ರಫಿ ತರಬೇತಿ

ದಾವಣಗೆರೆ, ಜು.27- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್, ಕೆನರಾ ಬ್ಯಾಂಕ್ ಮತ್ತು ರುಡ್‌ಸೆಟ್ ಸಂಸ್ಥೆಯಿಂದ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ಕುರಿತ 30 ದಿನಗಳ ಉಚಿತ ತರಬೇತಿ ಆಗಸ್ಟ್ 1ರಿಂದ ಆರಂಭವಾಗಲಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ-ಯುವತಿಯರು ಅರ್ಜಿ ಸಲ್ಲಿಸಬಹುದಾ ಗಿದೆ. 18 ರಿಂದ 45 ವರ್ಷದೊಳಗಿನ ಅರ್ಹ ಆಸಕ್ತರು ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಡಿಎಸ್‌ಎಲ್‌ಆರ್ ಕ್ಯಾಮೆರಾ ಹೊಂದಿರುವ ಗ್ರಾಮೀಣ ಅಭ್ಯರ್ಥಿಗ ಳಿಗೆ ಆದ್ಯತೆ ನೀಡಲಾಗುವುದು. ಮಾಹಿತಿಗಾಗಿ 97409 82585, 9113880324 ಸಂಪರ್ಕಿಸಿ.

## ಐಟಿಐ ಪ್ರವೇಶಕ್ಕಾಗಿ ಅರ್ಜಿ

ದಾವಣಗೆರೆ, ಜು.27- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

# ಮಿಥೇನ್ ಹೀರಿಕೊಳ್ಳುವ ಮರಗಳು

## ತಾಪಮಾನ ನಿಯಂತ್ರಣದ ಬಗ್ಗೆ ಹೊಸ ಬೆಳಕು ಚೆಲ್ಲಿದ ಅಧ್ಯಯನ

ನವದೆಹಲಿ, ಜು. 27 - ಮರಗಳು ಕಾರ್ಬನ್ ಡೈಆಕ್ಸೈಡ್ ಹೀರಿಕೊಂಡು ಆಕ್ಸಿಜನ್ ನೀಡುವ ಮೂಲಕ ತಾಪಮಾನ ಹೆಚ್ಚಳ ತಡೆಯುತ್ತವೆ ಎಂಬುದು ಈ ಹಿಂದೆಯೇ ಕಂಡು ಬಂದಿದೆ. ಆದರೆ ಮರಗಳು ತಾಪಮಾನ ಹೆಚ್ಚಳಕ್ಕೆ ಕಾರಣವಾಗುವ ಮಿಥೇನ್ ಅನಿಲ ಸಹ ಹೀರಿಕೊಳ್ಳುತ್ತವೆ ಎಂದು ಬ್ರಿಟನ್‌ನ ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದ ಉಪನ್ಯಾಸಕ ವಿನ್ಸೆಂಟ್ ಗೌಕಿ ಅವರ ನೇತೃತ್ವದ ತಂಡ ಪತ್ತೆ ಮಾಡಿದೆ.

ಮರಗಳು ಫೋಟೋಸಿಂಥೈಸಿಸ್ (ದ್ಯುತಿ ಸಂಶ್ಲೇಷಣೆ) ಮೂಲಕ ಕಾರ್ಬನ್ ಡೈಯಾಕ್ಸೈಡ್ ಹೀರಿಕೊಳ್ಳುತ್ತವೆ. ಅದನ್ನು ಇಂಗಾಲವಾಗಿ ಪರಿವರ್ತಿಸಿ ಮರದ ಬಡ್ಡೆ ಹಾಗೂ ಶಾಖೆಗಳಲ್ಲಿ ಸಂಗ್ರಹಿಸುತ್ತವೆ. ಈ ವಿಷಯದಲ್ಲಿ ಮುಂದುವರೆದ ಅಧ್ಯಯನ ನಡೆಸಿದಾಗ, ನಾವು ಭಾವಿಸಿದ್ದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಮರಗಳು ಪರಿಸರ ಸಮತೋಲನಕ್ಕೆ ನೆರವಾಗುವುದು ಕಂಡು ಬಂದಿದೆ ಎಂದು ಗೌಕಿ ಹೇಳಿದ್ದಾರೆ.

ಜಾಗತಿಕ ತಾಪಮಾನ ಹೆಚ್ಚಳಕ್ಕೆ ಮಿಥೇನ್ ಅನಿಲ ಶೇಕಡ 33ರಷ್ಟು ಕೊಡುಗೆ ನೀಡುತ್ತದೆ. ಅದರಲ್ಲೂ ಕಳೆದ ಎರಡು ದಶಕಗಳಲ್ಲಿ ವಾತಾವರಣದಲ್ಲಿ ಮಿಥೇನ್ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ.

ಕಾರ್ಬನ್ ಡೈ ಆಕ್ಸೈಡ್‌ಗಿಂತ ಹೆಚ್ಚಿನ ಮಟ್ಟದಲ್ಲಿ ಮಿಥೇನ್ ತಾಪಮಾನ ಹಿಡಿದಿಟ್ಟುಕೊಳ್ಳುತ್ತದೆ. ಆಸಕ್ತಿಕರ ಅಂಶ ಎಂದರೆ ಕಾರ್ಬನ್ ಡೈ ಆಕ್ಸೈಡ್ ವಾತಾವರಣದಲ್ಲಿ ನೂರಾರು ವರ್ಷಗಳ ಕಾಲ ಇರುತ್ತದೆ. ಆದರೆ ಮಿಥೇನ್ 10 ವರ್ಷಗಳ ಕಾಲ ಮಾತ್ರ ಇರುತ್ತದೆ. ಹೀಗಾಗಿ ವಾತಾವರಣದಲ್ಲಿ ಮಿಥೇನ್ ಅಂಶ ಕಡಿಮೆ ಮಾಡಿದರೆ ಅಲ್ಪ ಅವಧಿಯಲ್ಲೇ ತಾಪಮಾನಕ್ಕೆ ಕಡಿವಾಣ ಹಾಕಲು ನೆರವಾಗುತ್ತದೆ.

ಅಮೆಜಾನ್, ಸ್ವೀಡನ್, ಪನಾಮ ಹಾಗೂ ಬ್ರಿಟನ್ ವಲಯಗಳಲ್ಲಿ ನೂರಾರು ಮರಗಳ ಅಧ್ಯಯನ ಮಾಡಿದ ನಂತರ, ಮರಗಳು ಮಿಥೇನ್ ಹೀರಿಕೊಳ್ಳುವುದು ಸ್ಪಷ್ಟವಾಗಿದೆ. ಅದರಲ್ಲೂ ಹೆಚ್ಚು ಎತ್ತರಕ್ಕೆ ಬೆಳೆಯುವ ಮರಗಳು ಹೆಚ್ಚಿನ ಪ್ರಮಾಣದಲ್ಲಿ ಮಿಥೇನ್ ಹೀರಿಕೊಳ್ಳುವುದು ಕಂಡುಬಂದಿದೆ.

ಗೌಕಿ ತಂಡದ ಅಂದಾಜಿನ ಪ್ರಕಾರ ಪ್ರತಿ ವರ್ಷ ಮರಗಳು 25ರಿಂದ 50 ದಶಲಕ್ಷ ಟನ್‌ಗಳ ಮಿಥೇನ್ ಹೀರಿಕೊಳ್ಳುತ್ತವೆ. ಆದರೆ, ಅರಣ್ಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿರುವುದು ಕಳವಳಕಾರಿಯಾಗಿದೆ.

ಈಗ ನಾವು ಮತ್ತೆ ಅರಣ್ಯೀಕರಣಕ್ಕೆ ಮುಂದಾಗಬೇಕಿದೆ. ಅದರಲ್ಲೂ ಮಿಥೇನ್ ರೀತಿಯ ಅನಿಲಗಳನ್ನು ಹೀರಿಕೊಳ್ಳುವ ಮರಗಳಿಗೆ ಆದ್ಯತೆ ನೀಡಬೇಕಿದೆ ಎಂದು ಗೌಕಿ ಅವರ ತಂಡ ತಿಳಿಸಿದೆ.

## ದ್ವಿಚಕ್ರ ವಾಹನ ರಿಪೇರಿ ಉಚಿತ ತರಬೇತಿಗೆ ಅರ್ಜಿ

ದಾವಣಗೆರೆ, ಜು. 27 - ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಹಾಗೂ ರುಡ್‌ಸೆಟ್ ಸಂಸ್ಥೆಯ ವತಿಯಿಂದ ದ್ವಿಚಕ್ರ ವಾಹನ ರಿಪೇರಿ ಮತ್ತು ಸೇವೆ ಕುರಿತ 30 ದಿನಗಳ ಉಚಿತ ತರಬೇತಿಗಾಗಿ ಆಗಸ್ಟ್ 21 ರಿಂದ ಗ್ರಾಮೀಣ ನಿರುದ್ಯೋಗಿ ಯುವಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ: 9740982585, 9380162042 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ್ ತಿಳಿಸಿದ್ದಾರೆ.

# ಇಂದಿಗೂ ತನ್ನ ಅಸ್ತಿತ್ವ ಉಳಿಸಿಕೊಂಡಿರುವ ಮುದ್ರಣ ಮಾಧ್ಯಮ

ಹರಪನಹಳ್ಳಿ, ಜು.27- ಮಾಧ್ಯಮ ಕ್ಷೇತ್ರದಲ್ಲಿ ಇಂದು ಡಿಜಿಟಲ್ ಮಾಧ್ಯಮವು ಓದುಗರ ಸಂಖ್ಯೆ ಹೆಚ್ಚಿಸಿಕೊಂಡಿದ್ದರೂ ಮುದ್ರಣ ಮಾಧ್ಯಮ ಇಂದಿಗೂ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿದೆ ಎಂದು ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಘಟಕ ಹಾಗೂ ದಾವಣಗೆರೆಯ ಎಸ್.ಎಸ್. ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್ ಇವರ ಸಹಯೋಗದಲ್ಲಿ ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ 'ಪತ್ರಿಕಾ ದಿನಾಚರಣೆ' ಹಾಗೂ ಪೌರ ಕಾರ್ಮಿಕರಿಗೆ ಉಚಿತ ಹೃದಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಡಿಜಿಟಲ್ ಮಾಧ್ಯಮವು 90 ಮಿಲಿಯನ್ನಷ್ಟು ಓದುಗರನ್ನು ಹೊಂದಿದ್ದು, ಇದರ ಅರ್ಧದಷ್ಟು ಜನರು ಮಾತ್ರ ಪತ್ರಿಕೆ ಓದುತ್ತಾರೆ. 'ದಿ ಬೆಂಗಾಲ್ ಗೆಜೆಟ್' ಮತ್ತು ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಮೂಲಕ ಆರಂಭವಾದ ಪತ್ರಿಕೋದ್ಯಮ ಕಾಲಕ್ರಮೇಣ ವಾರ, ಮಾಸ, ದಿನ ಪತ್ರಿಕೆಗಳಾಗಿ ಹುಟ್ಟಿಕೊಂಡವು. ವಸ್ತು-ನಿಷ್ಠ, ನೈಜ ಘಟನೆಗಳ ಕುರಿತು ಸುದ್ದಿಗಳನ್ನು ಬಿತ್ತರಿಸುವ ಮೂಲಕ ಆಡಳಿತ ಯಂತ್ರವನ್ನು ಎಚ್ಚರಿಸುವ ಕೆಲಸ ಮಾಡುತ್ತಾ ಬಂದಿವೆ ಎಂದರು.



**ಪತ್ರಿಕಾ ಭವನ ನಿರ್ಮಾಣಕ್ಕೆ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಭರವಸೆ**

ಹರಪನಹಳ್ಳಿಯಲ್ಲಿ ಪತ್ರಿಕಾ ಭವನ ನಿರ್ಮಾಣ ಕುರಿತು ಅಧಿಕಾರಿಗಳ ಜೊತೆ ಚರ್ಚಿಸಿ, ಸೂಕ್ತ ಜಾಗ ಕಲ್ಪಿಸಿಕೊಡಲಾಗುವುದು ಎಂದು ಶಾಸಕರು ನೀಡಿದರು.

ಉಪ ವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಕರೆಯಲ್ಪಡುವ ಪತ್ರಿಕಾ ರಂಗವು ಸಮಾಜದ ಅಂಕುಡೊಂಕು ತಿದ್ದುವ ಕೆಲಸ ಮಾಡತ್ತಾ ಬಂದಿರುವುದನ್ನು ಶ್ಲಾಘಿಸಿದರು.

ಸಿಪಿಐ ನಾಗರಾಜ ಎಂ. ಕಮ್ಮಾರ್ ಮಾತನಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ಪತ್ರಕರ್ತರು ಮತ್ತು ಪೊಲೀಸರ ಜವಾಬ್ದಾರಿ ಹೆಚ್ಚಿರುತ್ತದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಮಾತನಾಡಿ, ಸಾಮಾಜಿಕ ಸಮಸ್ಯೆಗಳಿಗೆ ಪತ್ರಿಕೆಯ ಮೂಲಕ ಬೆಳಕು ಚೆಲ್ಲಿ ಆಡಳಿತ ವರ್ಗಕ್ಕೆ ಎಚ್ಚರಿಕೆ ಮೂಡಿಸುವ ಪತ್ರಕರ್ತರ ಕೆಲಸ ಸಮಾಜ ಸೇವೆಯಾಗಿದೆ ಎಂದರು.

> **ಸಾಮಾಜಿಕ ಜಾಲತಾಣದ ಹಾವಳಿಯಿಂದಾಗಿ ಪತ್ರಿಕೆಗಳ ಓದುಗರ ಸಂಖ್ಯೆ ಕ್ಷೀಣಿಸುತ್ತಿರುವುದು ಆತಂಕಕಾರಿಯಾಗಿದೆ.**
> **- ಪಿ. ಸತ್ಯನಾರಾಯಣ.,**
> ಕಾನಿಪ ವಿಜಯನಗರ ಜಿಲ್ಲಾಧ್ಯಕ್ಷ

ಪುರಸಭಾ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವ ರಾಜ ಸಂಗಪ್ಪನವರ್, ಪತ್ರಕರ್ತ ಬಿ. ರಾಮಪ್ರಸಾದ ಗಾಂಧಿ, ಎಸ್.ಎಸ್. ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್‌ನ ವೈದ್ಯ ಗುರುರಾಜ ಮಾತನಾಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ತಳವಾರ ಚಂದ್ರಪ್ಪ, ಪುರಸಭೆ ಸದಸ್ಯ ಗೊಂಗಡಿ ನಾಗರಾಜ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಲಕ್ಷ್ಮಣ್, ಸಂಘದ ರಾಜ್ಯ ಸಮಿತಿ ಸದಸ್ಯ ಪಿ. ವೆಂಕೋಬ ನಾಯಕ, ತಾಲ್ಲೂಕು ಕಾರ್ಯದರ್ಶಿ ಎಚ್. ದೇವೇಂದ್ರಪ್ಪ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಸಿ. ನಾಗರಾಜ ನಾಯ್ಕ್, ಟಿ.ಬಿ. ರಾಜು, ಪದಾಧಿಕಾರಿಗಳಾದ ಕೆ. ಉಚ್ಚೆಂಗೆಪ್ಪ, ಮಂಡಕ್ಕಿ ಸುರೇಶ, ಬಿ. ಮಾಧವ್‌ರಾವ್, ಕೆ. ಬಸವರಾಜ, ಕೆ. ಕುಬೇರಪ್ಪ ಇದ್ದರು.

## ಚಲನಚಿತ್ರ, ಒಟಿಟಿ ಸೆಸ್ ಹೇರಿಕೆಗೆ ವಿರೋಧ

ಬೆಂಗಳೂರು, ಜು. 27 - ಚಲನಚಿತ್ರ ಟಿಕೆಟ್‌ಗಳು ಹಾಗೂ ಒಟಿಟಿ ಚಂದಾ ಮೇಲೆ ಶೇಕಡ ಎರಡರಷ್ಟು ಸೆಸ್ ವಿಧಿಸುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ವಿರೋಧಿಸಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಮಂಡಳಿಯ ಅಧ್ಯಕ್ಷ ಎನ್.ಎಂ. ಸುರೇಶ್, ಸೆಸ್ ಹೇರುವುದರಿಂದ ಈಗಾಗಲೇ ಬಳಲುತ್ತಿರುವ ಉದ್ಯಮವನ್ನು ಅಸ್ಥಿರಗೊಳಿಸಿದಂತಾಗುತ್ತದೆ ಎಂದಿದ್ದಾರೆ.

ರಾಜ್ಯದ 637 ಚಿತ್ರಮಂದಿರಗಳ ಪೈಕಿ 130 ಈಗಾಗಲೇ ಮುಚ್ಚುವ ಹಂತದಲ್ಲಿವೆ. ಹೀಗಾಗಿ ಚಲನಚಿತ್ರ ಟಿಕೆಟ್‌ಗಳ ಮೇಲೆ ಸೆಸ್ ಹೇರಬಾರದು ಎಂದು ಹೇಳಿದ್ದಾರೆ.

ರಾಜ್ಯ ಚಲನಚಿತ್ರ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿರುವ ಕಾರ್ಮಿಕರಿಗೆ ನೆರವು ನೀಡಲು ಮಂಡಳಿಯೊಂದನ್ನು ಸ್ಥಾಪಿಸಲು ಹಾಗೂ ಈ ಮಂಡಳಿಗಾಗಿ ಸೆಸ್ ವಿಧಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಕುರಿತ ಮಸೂದೆಗೆ ಜುಲೈ 23ರಂದು ವಿಧಾನಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿದೆ. ರಾಜ್ಯಪಾಲರ ಒಪ್ಪಿಗೆ ಪಡೆದ ನಂತರ ಕಾಯ್ದೆ ಜಾರಿಗೆ ಬರಲಿದೆ.

ಚಲನಚಿತ್ರಗಳ ಮೇಲೆ ಸೆಸ್ ವಿಧಿಸುವ, ಅದರಲ್ಲೂ ಕನ್ನಡ ಚಿತ್ರಗಳ ಮೇಲೆ ಸೆಸ್ ವಿಧಿಸುವ ನಿರ್ಧಾರ ಮರುಪರಿಶೀಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಳ್ಳಲಾಗುವುದು ಎಂದು ಸುರೇಶ್ ಹೇಳಿದ್ದಾರೆ. ಕಾರ್ಮಿಕರ ಕಲ್ಯಾಣ ನಿಧಿ ಸ್ಥಾಪಿಸುವ ಕ್ರಮ ಸ್ವಾಗತಿಸುತ್ತೇವೆ. ಆದರೆ ಇದರಿಂದ ಈಗಾಗಲೇ ಕಷ್ಟದಲ್ಲಿರುವ ನಿರ್ಮಾಪಕರ ಮೇಲೆ ಹೊರೆಯಾಗಬಾರದು ಎಂದು ಸುರೇಶ್ ಹೇಳಿದ್ದಾರೆ.


**ಶ್ರೀ ಹುಲ್ಲುಮನೆ ಸೌಹಾರ್ದ ಸಹಕಾರ ಲಿ.**
# 644, ಶ್ರೀ ದುರ್ಗಾಕೃಪ, 60 ಅಡಿ ರಸ್ತೆ, ನಿಟುವಳ್ಳಿ, ದಾವಣಗೆರೆ-4.

ಮೊ. : 95130 29000

**ಅಧಿಸೂಚನೆ :**

ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

| | | | |
|---|---|---|---|
| 01) | ಪಿಗ್ಮಿ ಏಜೆಂಟ್ (ಗ್ಯಾರಂಟಿ ವೇತನ+ಕಮೀಷನ್ ಆಧಾರಿತ ನೇಮಕಾತಿ) (5000/- per month+ commission) | ಹುದ್ದೆಗಳು - 10 | SSLC, PUC |
| 02) | ಮಾರ್ಕೆಟಿಂಗ್ ಆಫೀಸರ್ (ಪೈಪ್ & ಎಲೆಕ್ಟ್ರಿಕಲ್ ಡಿವಿಜನ್) | ಹುದ್ದೆಗಳು - 05 | Any Degree & Diploma |
| 03) | ಜವಾನರು (Peon) | ಹುದ್ದೆಗಳು - 04 | - |

ಸ್ವಂತ ವಾಹನವುಳ್ಳ ಅಭ್ಯರ್ಥಿಗಳಿಗೆ ಮತ್ತು ಮಹಿಳೆಯರಿಗೂ ಆದ್ಯತೆ. ಅರ್ಜಿ ಸಲ್ಲಿಸುವ ವಿಧಾನ

email ID : hullumanesouhardha@gmail.com

ಆಡಳಿತ ಮಂಡಳಿ

# ಹರಿಹರ : ಸಂಪೂರ್ಣ ಹಾಳಾಗಿರುವ ಕೆಹೆಚ್‌ಬಿ ಕಾಲೋನಿ ರಸ್ತೆಗಳು



ಹರಿಹರ, ಜು. 27- ನಗರದ ಹೊರ ವಲಯದ ಅಮರಾವತಿ ಬಳಿ ಇರುವ ಕೆ.ಹೆಚ್.ಬಿ. ಕಾಲೋನಿಯ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ರಸ್ತೆಯ ಗುಂಡಿಗಳಲ್ಲಿ ನೀರು ತುಂಬಿಕೊಂಡು ನಿವಾಸಿಗಳು ಓಡಾಡುವುದಕ್ಕೆ ತೊಂದರೆಗಳಾಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಸ್ಥಳೀಯ ನಿವಾಸಿಗಳು ಮಾತನಾಡಿ, ಬಡಾವಣೆಯಲ್ಲಿನ ರಸ್ತೆಗಳನ್ನು ದುರಸ್ತಿ ಪಡಿಸುವಂತೆ ನಗರಸಭೆ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಮನವಿಯನ್ನೂ ಸಹ ಇತ್ತೀಚಿಗೆ ಸಲ್ಲಿಸಲಾಗಿತ್ತು ಎಂದರು.

ತದನಂತರ ಪತ್ರಿಕಾಗೋಷ್ಠಿಯನ್ನು ನಡೆಸಿ ನಗರಸಭೆಯ ಗಮನಸೆಳೆಯಲಾಗಿತ್ತು. ಇಷ್ಟೆಲ್ಲಾ ಮಾಡಿದ್ದರೂ, ನಗರಸಭೆಯ ಪೌರಾಯುಕ್ತರು ಮತ್ತು ಎಇಇ ಸಮಸ್ಯೆಗಳನ್ನು ಪರಿಹರಿಸದೇ ಮೌನ ವಹಿಸಿದ್ದರು. ಇದೀಗ ಧಾರಾಕಾರ ಮಳೆಯಿಂದಾಗಿ ಬಡಾವಣೆಯಲ್ಲಿರುವ ರಸ್ತೆಯ ಗುಂಡಿಗಳಲ್ಲಿ ನೀರು ತುಂಬಿಕೊಂಡು ಸರಾಗವಾಗಿ ಓಡಾಡಲು ತೊಂದರೆಯಾಗುತ್ತಿದೆ ಎಂದು ಹೇಳಿದರು.

ಮಳೆಯಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿದ್ದು, ಇದೂವರೆಗೂ ಚರಂಡಿ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡುತ್ತಿಲ್ಲ ಎಂದು ದೂರಿದರು.

ಈ ಸಂದರ್ಭದಲ್ಲಿ ರಾಮಮೂರ್ತಿ, ರೇವಣಸಿದ್ದಪ್ಪ, ಹೆಚ್. ನಿಜಗುಣ, ಪ್ರಕಾಶ್, ವೀರಯ್ಯ, ಗೌಡ್ರು ಕೊಟ್ರೇಶ್, ಆರ್.ಆರ್. ಕಾಂತರಾಜ್, ವೆಂಕಟೇಶ್, ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

# ಭದ್ರಾ ಡ್ಯಾಂ ಭರ್ತಿಗೆ ಕ್ಷಣಗಣನೆ

**(1ನೇ ಪುಟದಿಂದ)** ಈ ಬಾರಿ ಡ್ಯಾಮ್ ತುಂಬಲಿದೆ ಎಂಬ ವಿಶ್ವಾಸದೊಂದಿಗೆ ಭತ್ತದ ಸಸಿ ಮಡಿ ಚೆಲ್ಲಿದ್ದಾರೆ.

ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರು ಹರಿಸುವ ತೀರ್ಮಾನ ಮಾಡಲು ನಾಳೆ ಸೋಮವಾರ ಮಲವಗೊಪ್ಪದಲ್ಲಿರುವ ಭದ್ರಾ ಕಾಡಾ ಕಚೇರಿಯಲ್ಲಿ ಭದ್ರಾ ಐಸಿಸಿ ಸಭೆ ಕರೆದಿದ್ದು, ಅಂದು ರಾತ್ರಿಯಿಂದಲೇ ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಲಾಗುವುದೆಂದು ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ 'ಜನತಾವಾಣಿ' ಗೆ ತಿಳಿಸಿದರು.



ಮಲೆನಾಡಿನಲ್ಲಿ ಶನಿವಾರ ಮಳೆ ಪ್ರಮಾಣ ಕಡಿಮೆ ಆಗಿದ್ದು, ತುಂಗಾ ಮತ್ತು ಭದ್ರಾ ನದಿಯಲ್ಲಿ ನೀರಿನ ಹರಿವು ಸ್ವಲ್ಪ ಇಳಿಕೆ ಆಗಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಶನಿವಾರ ಬೆಳಗ್ಗೆ 80 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಸಂಜೆ 72 ಸಾವಿರ ಕ್ಯೂಸೆಕ್ಸ್ ಗೆ ಇಳಿಕೆ ಕಂಡಿದ್ದು ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ.


ಇದರಿಂದಾಗಿ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಮತ್ತೆ ಹೆಚ್ಚಾಗಿದ್ದು ಉಕ್ಕಡಗಾತ್ರಿ- ಫತ್ತೇಪುರ ಸಂಪರ್ಕ ಸೇತುವೆ ಮತ್ತು ತೋಟ, ಗದ್ದೆಗಳು ಹಾಗೂ ಅಜ್ಜಯ್ಯ ನ ದೇವಸ್ಥಾನದ ಸ್ನಾನ ಘಟ್ಟಗಳು, ಹಣ್ಣುಕಾಯಿ ಅಂಗಡಿಗಳು ನದಿ ಹಿನ್ನೀರಿನಲ್ಲಿ ಜಲಾವೃತವಾಗಿವೆ.

ಭದ್ರಾ ಜಲಾಶಯಕ್ಕೆ ಶನಿವಾರ ಬೆಳಗ್ಗೆ 50 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಸಂಜೆ 42 ಸಾವಿರ ಕ್ಯೂಸೆಕ್ಸ್ ಗೆ ಇಳಿಕೆ ಕಂಡಿದೆ ಎನ್ನಲಾಗಿದೆ. ಶನಿವಾರ ಸಂಜೆ ಜಲಾಶಯದ ನೀರಿನ ಮಟ್ಟ 180 ಅಡಿ ದಾಟಿದ್ದು ಕಳೆದ ವರ್ಷಕ್ಕಿಂತ 22 ಅಡಿ ನೀರು ಹೆಚ್ಚು ಸಂಗ್ರಹವಾಗಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 158 ಅಡಿ ನೀರಿತ್ತು. ಜಲಾಶಯದ ಗರಿಷ್ಠ ಮಟ್ಟ 186 ಅಡಿಗಳಾಗಿದ್ದು, ಜಲಾಶಯ ಸಂಪೂರ್ಣ ಭರ್ತಿಗೆ 6 ಅಡಿ ಮಾತ್ರ ಬಾಕಿ ಇದೆ.

**ನದಿಗೆ ನೀರು ಸಾಧ್ಯತೆ :** ಭದ್ರಾ ಜಲಾಶಯ ಭರ್ತಿಗೆ ಕ್ಷಣ ಗಣನೆ ಆರಂಭವಾಗಿರುವುದರಿಂದ ಜಲಾಶಯದ ಹಿತ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಯಾವುದೇ ಕ್ಷಣದಲ್ಲಿ ನದಿಗೆ ನೀರು ಹರಿಯುವ ಸಾಧ್ಯತೆ ಇದ್ದು, ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಭದ್ರಾ ಅಧೀಕ್ಷಕ ಇಂಜಿನಿಯರ್ ಸುಜಾತ ತಿಳಿಸಿದ್ದಾರೆ.

## ಪದವಾಣಿ-108

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.




**ಎಡದಿಂದ ಬಲಕ್ಕೆ :**

| | |
|---|---|
| 1) ಇದು ಕಲ್ಪನಾಳ ಊಹೆ | 3 |
| 5) ದಿನದ ಮೊದಲ ವ್ಯಾಪಾರ | 2 |
| 6) ರೋಗ ಹೀಗೆ ಬಂದಿದೆ | 2 |
| 7) ಹರನಿಗೆ ಕಂಡ ವ್ಯಾಪಾರಿ | 3 |
| 8) ಗಿಳಿಯ ಮೈ ಬಣ್ಣ | 3 |
| 9) ಕಂಬದ ಹಿಂದೆ ನಿಂತಾಗ ಬಂದ ಕಣ್ಣೀರು | 3 |
| 10) ನಂದನಿಗಾದ ಸಂತೋಷ | 3 |
| 11) ಕಾಡಿನಲ್ಲಿ ಬೆಳೆಯುವ ಭತ್ತ | 3 |
| 13) ಕ್ಷೀರವಲ್ಲ, ಲವಣ | 2 |
| 14) ಅಂಕಗಣಿತದ ಕೋಷ್ಟಕ | 2 |
| 16) ಮೂರಕ್ಷರದ ಒಳಸಂಚು | 3 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ನಮ್ಮನಾಡಿನ ನುಡಿಯನ್ನು ಆಡುವ ಕೂಸು | 6 |
| 2) ಕುಂಟು ಕಾರಣ | 2 |
| 3) ಮಣಿ ಮಾಡಿದ ನಮಸ್ಕಾರ | 3 |
| 4) ಬಜಾರಿ ಬಂದಿದ್ದು ಈ ಪೇಟೆಗೆ | 3 |
| 8) ಕೊಳವೆಯಿಂದ ಚಿಕ್ಕದಾಗಿ ನೀರು ಒದಗಿಸುವ ಸುಧಾರಿತ ಕ್ರಮ | 6 |
| 10) ರತಿಗೆ ಎತ್ತಿದ ನೀರಾಜನ | 3 |
| 12) ಮಣಿ ಧರಿಸಿ ಬಂದ ಚೆಲುವೆ | 3 |
| 15) ಪಾಪ ಕೃತ್ಯ ಮಾಡಿದಾತ | 2 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ – 107 ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ವ್ಯಸನ 3) ಆರೋಹ 5) ದಿವಾನಖಾನೆ 6) ರಣಭೇರಿ 8) ತೆಲಂಗಾಣ 9) ನಸುಗೆಂಪು 10) ಗೆಳೆತನ. 12) ಸಿರಿವಂತಿಕೆ 14) ಆರೋಹಿ 15) ನೆಗಡಿ.

ಮೇಲಿನಿಂದ ಕೆಳಕ್ಕೆ : 1) ವ್ಯವಹಾರ 2) ನದಿ 3) ಆನೆ 4) ಹಗರಣ 7) ರಿಕಾಪು 8) ತೆರಿಗೆ 9) ನಮಗಆ (ಆಗಮನ) 11) ನರನಾಡಿ 12) ಸಿಹಿ 13) ಕೆನೆ.

## ತೃಪ್ತಿ ಗುಣದಿಂದ ಸಮಾಜದಲ್ಲಿ ಶಾಂತಿ

**(1ನೇ ಪುಟದಿಂದ)** ಮಾಡಲಾಗುತ್ತಿದೆ. ಇದು ಸಮಾಜದಲ್ಲಿ ಸರಿಯಾದ ಬೆಳವಣಿಗೆಯಲ್ಲ ಎಂದು ಹೇಳಿದರು. ಪ್ರಶಸ್ತಿ ಪಡೆದವರಿಗೆ ಅಭಿನಂದಿಸಿದ ಸಂತೋಷ್ ಹೆಗ್ಡೆ ಅವರು, ಪ್ರಶಸ್ತಿ ಪುರಸ್ಕತರು ಇನ್ನಷ್ಟು ಹೆಚ್ಚಿನ ಉತ್ಸಾಹದಿಂದ ಓದಲು, ಸಮಾಜದಲ್ಲಿ ಗುರುತಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು.

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಗಡಿನಾಡ ಶಾಖೆಯ ಅಧ್ಯಕ್ಷೆ ಜಯಲಕ್ಷ್ಮಿ ಕಾರಂತ, ಗೌರವ ಸಲಹೆಗಾರ ಬಿ.ಶಾಂತಪ್ಪ ಪೂಜಾರಿ, ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ, ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ವಸಂತಿ ಮಂಜುನಾಥ್ ಉಪಸ್ಥಿತರಿದ್ದರು. ಪುಷ್ಪ ಮಂಜುನಾಥ್ ಅತಿಥಿಗಳನ್ನು ಸ್ವಾಗತಿಸಿದರು. ಜ್ಯೋತಿ ಗಣೇಶ್ ಶೆಣೈ ಪ್ರಾರ್ಥಿಸಿದರು.

## ವಾಲ್ಮೀಕಿ ನಿಗಮ ಹಗರಣ : 16 ಕೆ.ಜಿ. ಬಂಗಾರ, 2.55 ಕೋಟಿ ರೂ. ವಶ

**(1ನೇ ಪುಟದಿಂದ)** ಮೂಲಗಳು ತಿಳಿಸಿವೆ.

ಇನ್ನೋರ್ವ ಆರೋಪಿ ಶ್ರೀನಿವಾಸರಾವ್ ಮನೆಯಿಂದ ಒಂದು ಕೆ.ಜಿ. ಬಂಗಾರ ವಶಪಡಿಸಿಕೊಳ್ಳಲಾಗಿದೆ. ಇದಲ್ಲದೆ ಕಟ್ಟಡ ನಿರ್ಮಾಣಕಾರನೋರ್ವನಿಂದ 2.55 ಕೋಟಿ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಐಷಾರಾಮಿ ಫ್ಲಾಟ್ ಖರೀದಿಸಲು ವರ್ಮ ಈತನಿಗೆ ಹಣ ನೀಡಿದ್ದ. ಈ ಬಗ್ಗೆ ಕಟ್ಟಡ ನಿರ್ಮಾಣಕಾರನನ್ನು ಸಂಪರ್ಕಿಸಿದಾಗ ತಕ್ಷಣವೇ ಹಣ ಮರಳಿಸಿದ್ದು ಅದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್.ಐ.ಟಿ. ಮೂಲಗಳು ಹೇಳಿವೆ.

## ಮರುಪಾವತಿಗೆ ವಿಫಲ; ಇಂಧನ ಸಾಲಕ್ಕೆ ಪಾಕ್ ಪರದಾಟ

ಇಸ್ಲಾಮಾಬಾದ್, ಜು. 27 - ಪಾಕಿಸ್ತಾನದ ಇಂಧನ ವಲಯಕ್ಕೆ ಚೀನಾದಿಂದ ಸಾಲ ಪಡೆಯುವ ಕುರಿತು ಸ್ಪಷ್ಟತೆ ಮೂಡದೇ ಇರುವುದು, ಪಾಕ್ ಸರ್ಕಾರದಲ್ಲಿ ಚಿಂತೆಗೆ ಕಾರಣವಾಗಿದೆ. ಪಾಕಿಸ್ತಾನ ಸರ್ಕಾರದ ಇಬ್ಬರು ಸಚಿವರು ಚೀನಾಗೆ ತೆರಳಿ ಸಾಲ ಮರುಪಾವತಿ ಹೊಂದಾಣಿಕೆ ಕುರಿತು ಚರ್ಚಿಸುತ್ತಿದ್ದಾರೆ.

ಸಚಿವರಾದ ಮೊಹಮ್ಮದ್ ಔರಂಗಜೇಬ್ ಹಾಗೂ ಸರ್ದಾರ್ ಅವೈಸ್ ಅಹಮದ್ ಖಾನ್ ಅವರು ಕಳೆದ ಮೂರು ದಿನಗಳಿಂದ ಬೀಜಿಂಗ್‌ನಲ್ಲಿ ಇದ್ದಾರೆ. ಉಭಯರು ಹಲವಾರು ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಿದ್ದಾರೆ.

ಸಾಲ ಕುರಿತು ಚರ್ಚೆ ನಡೆಸಲು ಚೀನಾ ಮೊದಲು ಉತ್ಸುಕವಾಗಿರಲಿಲ್ಲ. ಇದರಿಂದಾಗಿ ಉಭಯ ಸಚಿವರ ಭೇಟಿ ವಿಳಂಬವಾಗಿತ್ತು. ಇಂಧನ ಸಾಲಕ್ಕೆ ಸಂಬಂಧಿಸಿದಂತೆ ಉಭಯ ದೇಶಗಳ ನಡುವೆ ಭಿನ್ನಮತ ಇದೆ ಎಂಬ ಮಾತುಗಳು ಕೇಳಿ ಬಂದಿದ್ದವು.

ಸಾಲ ಮರುಪಾವತಿ ಗಡುವು ಬದಲಿಸಬೇಕು ಎಂದು ಪಾಕಿಸ್ತಾನ ಸರ್ಕಾರ ಕಳೆದ ಗುರುವಾರದಂದು ಚೀನಾಗೆ ಔಪಚಾರಿಕವಾಗಿ ಮನವಿ ಸಲ್ಲಿಸಿತ್ತು. ಚೀನಾ ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿ.ಪಿ.ಇ.ಸಿ.) ಯೋಜನೆಗಾಗಿ ಪಾಕಿಸ್ತಾನ ಸಾಲ ಪಡೆದಿದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಸಿ.ಪಿ.ಇ.ಸಿ. ಮೂಲಕ ವಿದ್ಯುತ್ ಯೋಜನೆಗಳಿಗೆ ಪಡೆದಿರುವ ಸಾಲ ಶೇಕಡ 44ರಷ್ಟು ಹೆಚ್ಚಾಗಿ 401 ಶತಕೋಟಿ ರೂಪಾಯಿಗಳಿಗೆ ತಲುಪಲಿದೆ ಎಂದು ಪಾಕಿಸ್ತಾನದ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ. ಕಳೆದ ಒಂದು ವರ್ಷದಲ್ಲಿ ಪಾಕಿಸ್ತಾನದ ಸಾಲ 122 ಶತಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ.

ಪಾಕಿಸ್ತಾನ ಸಾಲ ಮರುಪಾವತಿ ಮಾಡದೇ ಇರುವುದು ಸಿಪಿಇಸಿ ಇಂಧನ ಚೌಕಟ್ಟು ಒಪ್ಪಂದದ ಉಲ್ಲಂಘನೆ ಆಗಿದೆ. ಇದು ಉಭಯ ದೇಶಗಳು ಇನ್ನಷ್ಟು ಹಣಕಾಸು ಹಾಗೂ ವಾಣಿಜ್ಯ ಸಂಬಂಧ ಬೆಳೆಸುವುದಕ್ಕೆ ಅಡ್ಡಿಯಾಗಿದೆ ಎಂದು ಪಾಕಿಸ್ತಾನದ ಪತ್ರಿಕೆ ಹೇಳಿದೆ.

ಇಂಧನ ಸಾಲ ಮರುಪಾವತಿಸಲು ಇನ್ನೂ ಎಂಟು ವರ್ಷಗಳ ಹೆಚ್ಚುವರಿ ಅವಧಿ ನೀಡಬೇಕು ಎಂದು ಪಾಕಿಸ್ತಾನ ಮನವಿ ಮಾಡಿಕೊಂಡಿದೆ. ಇದರ ಜೊತೆಗೆ ಅಮೆರಿಕದ ಡಾಲರ್ ಆಧರಿಸಿದ ಬಡ್ಡಿ ಪಾವತಿಯನ್ನು ಚೀನಾದ ಕರೆನ್ಸಿಗೆ ಬದಲಿಸಬೇಕು ಎಂದೂ ಪಾಕಿಸ್ತಾನ ಕೇಳುತ್ತಿದೆ.

ಈ ಕ್ರಮಗಳಿಂದ ಇಂಧನ ವೆಚ್ಚ ಕಡಿಮೆಯಾಗಲಿದೆ ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿ ಮೂಲಕ ಪಾಕಿಸ್ತಾನ 7 ಶತಕೋಟಿ ಡಾಲರ್ ನೆರವಿನ ಪ್ಯಾಕೇಜ್ ಪಡೆಯಲು ಸಹಕಾರಿಯಾಗಲಿದೆ ಎಂದು ಹೇಳಲಾಗುತ್ತಿದೆ.

ಪಾಕಿಸ್ತಾನದಲ್ಲಿನ ನೇರ ಅಂತರರಾಷ್ಟ್ರೀಯ ಹೂಡಿಕೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಒಟ್ಟು ವಿದೇಶಿ ಹೂಡಿಕೆಯ ಅರ್ಧದಷ್ಟು ಚೀನಾದಿಂದ ಬರುತ್ತಿದೆ. 2024ರ ಹಣಕಾಸು ವರ್ಷದಲ್ಲಿ ಚೀನಾದ ನೇರ ಹೂಡಿಕೆ ಶೇಕಡ 17ರಷ್ಟು ಹೆಚ್ಚಾಗಿದೆ.

ಆದರೆ, ಚೀನಾದ ಘಟಕಗಳಿಂದ ಖರೀದಿಸಲಾದ ವಿದ್ಯುತ್‌ಗೆ ಸಮಯಕ್ಕೆ ಸರಿಯಾಗಿ ಹಣ ಪಾವತಿಸಲು ಪಾಕಿಸ್ತಾನ ವಿಫಲವಾಗಿದೆ. ಇದರಿಂದಾಗಿ ಸಿಪಿಇಸಿ ಒಪ್ಪಂದದ ಉಲ್ಲಂಘನೆಯಾಗಿದೆ. ಇದು ಚೀನಾ ಇಂಧನ ವಲಯಕ್ಕೆ ಹೊಸ ಸಾಲ ನೀಡಲು ಇರುವ ಹಿಂಜರಿಕೆಯಾಗಿದೆ ಎಂದು ಹೇಳಲಾಗುತ್ತಿದೆ.

## ಕಾಂಗ್ರೆಸ್‌ನಿಂದ ಸತ್ಯ ಸಂದೇಶ

**(1ನೇ ಪುಟದಿಂದ)** ಜೆಡಿಎಸ್ ಆರೋ ಪಗಳಿಗೆ ಉತ್ತರ ನೀಡಲು ತೀರ್ಮಾನಿಸಿದೆ.

ಕಾಂಗ್ರೆಸ್ ಹಗರಣಗಳಿಗೆ ಸಂಬಂಧಿಸಿ ದಂತೆ ಪಾದಯಾತ್ರೆ ಎಂದು ನಡೆಸಬೇಕು, ಅದರ ರೂಪುರೇಷೆ ಹೇಗಿರಬೇಕು ಎಂಬ ಬಗ್ಗೆ ನಾಳೆ ಎನ್‌ಡಿಎ ಮಿತ್ರ ಪಕ್ಷಗಳು ಸಭೆ ನಡೆಸಲಿವೆ. ಎನ್‌ಡಿಎ ಸಭೆ ತೆಗೆದುಕೊಳ್ಳುವ ತೀರ್ಮಾನದ ಮೇಲೆ ಕಾಂಗ್ರೆಸ್‌ನ ಸತ್ಯ ಸಂದೇಶದ ಸಭೆ ಮತ್ತು ದಿನಾಂಕ ನಿಗದಿಯಾಗಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

## ಹರಿಹರ : ಡಿಪ್ಲೋಮಾ ಪ್ರವೇಶಕ್ಕಾಗಿ ಅರ್ಜಿ

ಹರಿಹರ, ಜು. 27 - ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಆಟೋಮೇಷನ್, ರೊಬೊಟಿಕ್ಸ್, ಡಿಪ್ಲೋಮಾ ಇನ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಹಾಗೂ ಡಿಪ್ಲೋಮಾ ಇನ್ ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ ಪಾಸಾದವರು ವಿವರಕ್ಕೆ ಸಂಪರ್ಕಿಸಿ: 98459 41245, 8884488202.


**ಹೊಸ ಅಥವಾ ಹಳೆಯ ಶ್ರೀ ಶಕ್ತಿ ಸಂಘಗಳಿಗೆ 5 ಲಕ್ಷ ರೂ. ತನಕ ಲೋನ್ ಮಾಡಿಸಿಕೊಡಲಾಗುವುದು.**
ಸಂಪರ್ಕಿಸಿ : 98449 69738

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ 2ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, ಕಸ್ತೂರ ಬಾ ಸಮಾಜದ ಪಕ್ಕ, 2 BHK, 2nd Floor, 3 BHK 1st Floor. (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ : 99866 17014, 99457 75766

**ಮನೆಗಳು ಬಾಡಿಗೆಗೆ ಇವೆ**
ಸುಬ್ರಹ್ಮಣ್ಯ ನಗರದಲ್ಲಿ ಹೊಸ ಮನೆಗಳು ಬಾಡಿಗೆಗೆ ಇವೆ. ಡಬಲ್ ಬೆಡ್ ರೂಮ್ ಹೈಟೆಕ್ ಆಸ್ಪತ್ರೆ ಹತ್ತಿರ ಸರ್ವೀಸ್ ರೋಡ್ ಸಮೀಪ ಕಡಿಮೆ ಬೆಲೆಗೆ ಸೈಟುಗಳು ಮಾರಾಟಕ್ಕೆ ಇವೆ. NA ಸೈಟುಗಳು 15x40=600 ಅಡಿ 7,75,000 (ಏಳು ಲಕ್ಷದ ಎಪ್ಪತ್ತೈದು ಸಾವಿರ ರೂ.ಗಳು) ಆಂಜನೇಯ ಮಿಲ್ ಹತ್ತಿರ ಬಾಡಾ ಕ್ರಾಸ್ ಬಳಿ. ಸಂಪರ್ಕಿಸಿ : 80505 91277

**ಗೋಡೌನ್ ಬಾಡಿಗೆಗೆ**
'ಶ್ರೀ ವೆಂಕಟೇಶ್ವರ ರೈಸ್ ಮಿಲ್' ಚನ್ನಗಿರಿ ರಸ್ತೆಯಲ್ಲಿರುವ ತ್ಯಾವಣಿಗಿ ಹತ್ತಿರ ರೋಡ್ ಪಕ್ಕದಲ್ಲಿರುವ 64HB Power ಇರುವ 84x88 ಗೋಡೌನ್ ಬಾಡಿಗೆಗಿದೆ. ಉಪಯೋಗ : ಮೆಕ್ಕೆಜೋಳ, ಅಡಿಕೆ ಪ್ಲೇಟ್ ತಯಾರು ಮಾಡಲು ಕಣ / ಗೋಡೌನ್ ಬಾಡಿಗೆಗಿದೆ. 99451 59582

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ 78997 60749, 99726 75759

**ಸೈಟ್ ಮಾರಾಟಕ್ಕಿದೆ**
40x60 ಅಳತೆಯ ಸೈಟ್ ನಂ. 2291-HIG-1, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) 94814 17793

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾಂಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only. 94837 23166

**ಅಡಿಕೆ ಬೇಯಿಸಲು ಕಣ ಬಾಡಿಗೆಗೆ**
ಚನ್ನಗಿರಿ ರಸ್ತೆಯಲ್ಲಿರುವ ಮತ್ತಿ ರೈಸ್‌ಮಿಲ್ ಆವರಣದಲ್ಲಿ ಶೆಡ್ ಇದ್ದು, ಅಡಿಕೆ ಬೇಯಿಸಿ, ಒಣಗಿಸಲು ಕಣ ಯೋಗ್ಯವಾಗಿದೆ. ಈ ಕಣವನ್ನು ಬಾಡಿಗೆ ಆಧಾರದಲ್ಲಿ ಕೊಡಲಾಗುವುದು. ತೆಂಗಿನ ಸಸಿಗಳು ಸಿಗುತ್ತವೆ. 99451 59582

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ : ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್ ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಹೊಸಮನೆ ಮಾರಾಟಕ್ಕಿದೆ**
30x40 ಗ್ರೌಂಡ್ ಫ್ಲೋರ್, 2 BHK, ಕಾರ್ ಪಾರ್ಕಿಂಗ್, 1ನೇ ಮಹಡಿ, 2ನೇ ಮಹಡಿಯಲ್ಲಿ 4 BHK ಡ್ಯೂಪ್ಲೆಕ್ಸ್, ಒಟ್ಟು 3 ಮಹಡಿ ಮನೆಗಳು ಮಾರಾಟಕ್ಕಿವೆ. ಸಿದ್ದಗಂಗಾ ಸ್ಕೂಲ್, ಸಿದ್ದರಾಮೇಶ್ವರ ನಗರ ಹಿಂಭಾಗ, ದಾವಣಗೆರೆ. 80730 66214, 98807 71592

**2 BHK ಮನೆ ಬಾಡಿಗೆಗಿದೆ**
1ನೇ ಮಹಡಿ, ಪಿಸಾಳೆ ಕಾಂಪೌಂಡ್, 3ನೇ ಕ್ರಾಸ್, ನರಹರಿ ಚೌಟ್ರಿ ಹಿಂಭಾಗ, ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ. 74064 08838

**ತೆಂಗಿನ ಸಸಿಗಳು ಮಾರಾಟಕ್ಕಿವೆ**
ಉತ್ತಮವಾದ 2 ವರ್ಷದ ಜವಾರಿ ತೆಂಗಿನ ಸಸಿಗಳು ಮಾರಾಟಕ್ಕಿವೆ. ವೆಂಕಟೇಶ್ವರ ರೈಸ್ ಮಿಲ್, ಮತ್ತಿ. 99451 59582

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಮಾಲ್ ಶಾಮನೂರು ಮುಖ್ಯ ರಸ್ತೆಯಲ್ಲಿ 3 ಬೆಡ್ ರೂಂ ಮತ್ತು 1ನೇ ಮಹಡಿಯಲ್ಲಿ ಬಾಡಿಗೆ ಬರುವ 2 ಸಿಂಗಲ್ ಬೆಡ್ ರೂಂ ಮನೆಗಳು, 2 ಬೋರ್‌ವೆಲ್ ಇರುವ ಮನೆ ಮಾರಾಟಕ್ಕಿದೆ. 96322 60303, 95359 98914 94482 29867

**WANTED JOBS**
We are hiring telecallers females only, Basic Salary & Incentives, Quali ; PUC & Any Degree, Location : Davanagere. **Walk In Interview 29.07.2024 to 04.08.2024** 73378 54621, 90663 32625

**ಕೆಲಸಕ್ಕೆ ಬೇಕಾಗಿದ್ದಾರೆ**
ವಯೋವೃದ್ಧ ಪೇಷೆಂಟ್‌ಗಳನ್ನು ನೋಡಿಕೊಳ್ಳಲು ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತರು ಸಂಪರ್ಕಿಸಿ : 63635 85792, 63647 29758

ದಾವಣಗೆರೆ ಮಹಾಜನತೆಗೆ ಸಿಹಿ ಸುದ್ದಿ
**ನ್ಯೂ ಮೂನ್‌ಲೈಟ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್**
ನಿಮ್ಮ "ನ್ಯೂ ಮೂನ್ ಲೈಟ್ ರೆಸ್ಟೋರೆಂಟ್"ನಲ್ಲಿ ಆಫರ್-ಆಫರ್-ಆಫರ್ ಕೇವಲ 100 ರೂ.ಗೆ ಚಿಕನ್ ಬಿರಿಯಾನಿ Buy One Get One Free 1+1 ಪ್ರತಿ ಭಾನುವಾರ ಸಮಯ : ಬೆಳಿಗ್ಗೆ 10 ರಿಂದ ರಾತ್ರಿ 10. ಸ್ಥಳ : ಬಾಡಾ ಕ್ರಾಸ್ ದಾವಣಗೆರೆ. 99006 61421, 95909 30395

**NEW HOUSE FOR SALE**
East facing main door, 4 BHK with an office or gym room in the parking floor. Along with lift Parking upto 3 cars. Location : SS Layout 'B' Block, near Kundwad Kere 7204808516, 9686462502

**ಶೆಡ್‌ಗಳು ಬಾಡಿಗೆಗೆ ಇವೆ**
2500 ಚದರ ಅಡಿ 730 ಚದರ ಅಡಿ ಕರೂರು ಕೈಗಾರಿಕಾ ಪ್ರದೇಶ ಸಂಪರ್ಕಿಸಿ : 94484 42742

**3 BHK / 2 BHK ಮನೆ ಬಾಡಿಗೆಗಿದೆ**
ವಾಸ್ತು ಪ್ರಕಾರದ, ಪೂರ್ವ ಮುಖದ ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೆಲ್ ಪಕ್ಕ, Extended MCC 'B' Block, ಕಾರ್ಪೊರೇಷನ್ ನೀರು, ಸ್ವಂತ ಬೋರ್, ಕಾರ್ ಪಾರ್ಕಿಂಗ್ ವಾರ್ಡ್ ರೋಬ್‌ಗಳು, ಅಟ್ಯಾಚ್ಡ್ ಬಾತ್ ರೂಂ,ಕಾಮನ್ ಬಾತ್ ರೂಂ ಕಮೋಡ್ ಇರುವ 3BHK/ 2BHK ಮನೆ, ಸಾತ್ವಿಕಾಹಾರಿ/ಸ್ಯಾಹಾರಿಗಳಿಗೆ ಮಾತ್ರ 63015 58346

**HOUSE FOR LEASE**
2 Bed Room, Attached Bathroom Muncipal/borewell water, Car Parking, North face, ground floor for Lease. # 93, Shruthi Nilaya, Nijalingappa Badavane, DVG. only vegeterians 94814 17793

**ಮನೆ ಮಾರಾಟಕ್ಕಿದೆ**
#2287, 8ನೇ ಮೇನ್, ಎಂ.ಸಿ.ಸಿ. ಎ ಬ್ಲಾಕ್, ಸಾಯಿಬಾಬಾ ಮಂದಿರ ಹತ್ತಿರ, 44x60 ಸೈಟ್‌ನಲ್ಲಿ ಕಟ್ಟಿರುವ ಎರಡು ಅಂತಸ್ತಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ : 98868 50964

**ನಿವೇಶನ ಮಾರಾಟಕ್ಕಿದೆ**
ಕುಂದುವಾಡ ಕೆರೆ ಎಂಟ್ರಿ ಗೇಟ್ (ಪಶ್ಚಿಮ ಗೇಟ್) ಎದುರು, ವಾಟರ್ ಪ್ಯೂರಿಫಿಕೇಶನ್ ಪ್ಲಾಂಟ್ ಹಿಂಭಾಗ, 30x60, ಉತ್ತರ ದಿಕ್ಕು ನಿವೇಶನ ಮಾರಾಟಕ್ಕಿದೆ. 99640 19784 99643 80953

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಒಂದು ವರ್ಷದ ಹಾಗೂ ಎರಡು ವರ್ಷದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ಅಶೋಕ ನಗರ, ಶಿವಮೊಗ್ಗ (ಜಿ) ಭದ್ರಾವತಿ (ತಾ) 99459 13323, 96864 66760

**Sre Security Service**
**Required Accounts Officer**
Minimum 3 years experinece, GST, Tally Excel, Male of Female, Attractive Salary 9611766438, 9901355531

**FLAT FOR SALE**
ದಾವಣಗೆರೆ ವಿದ್ಯಾನಗರ ಕೊನೆ ಬಸ್ ಸ್ಟಾಪ್ ಬಳಿ 3BHK Semi furnished ಫ್ಲಾಟ್ ಮಾರಾಟಕ್ಕಿದೆ. ಸಂಪರ್ಕಿಸಿ: 88614 11687

**ಸೈಟುಗಳು ಮಾರಾಟಕ್ಕಿವೆ**
SS ಬಡಾವಣೆ, ಗ್ಲಾಸ್ ಹೌಸ್ ಹತ್ತಿರ 30x32 ಪೂರ್ವ ಹಾಗೂ ಮಹಾಲಕ್ಷ್ಮಿ ಲೇಔಟ್, ಶಿವಗಂಗಾ ಹಾಲ್ ಹಿಂಭಾಗ 35x65 ಪೂರ್ವ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ : ಆನಂದ್ ಗೋವಿಂದಕರ್ 63614 60852

**ERA GROUP CAMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು. Qualification : SSLC to Degree 7000K to 9000K+ Incentives. ಸ್ಥಳ : KR Market Davanagere. 95350 51589, 78670 75786

**ಮನೆ ಮಾರಾಟಕ್ಕಿದೆ**
DCM ಟೌನ್ ಶಿಪ್‌ನಲ್ಲಿ 20x60 ಅಳತೆಯ 3 ಅಂತಸ್ತಿನ ಪೂರ್ವ ದಿಕ್ಕಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ : 99640 49273

**ಕಡಿದ ಅಡಿಕೆ ಮರಗಳನ್ನು ಉಚಿತವಾಗಿ ನೀಡಲಾಗುವುದು**
ದಾವಣಗೆರೆ ಹತ್ತಿರದ ಕೈದಾಳದಲ್ಲಿರುವ ಅಡಿಕೆ ತೋಟದಲ್ಲಿ ದೊಡ್ಡ ಅಡಿಕೆ ಮರಗಳನ್ನು ಕಡಿಯಲಾಗಿದ್ದು, ಅವುಗಳನ್ನು ಉಚಿತವಾಗಿ ನೀಡಲಾಗುವುದು. ಸಂಪರ್ಕಿಸಿ. 98807 39392

**WANTED**
Banking Sector
**TELE CALLER**
Quali. : PUC & Above 99869 19000

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಬೂದಿಹಾಳ್ ಹತ್ತಿರ ಕಮ್ಮತ್ತಹಳ್ಳಿ (ದಾವಣಗೆರೆಯಿಂದ 30 ಕಿ.ಮೀ.)ಯಲ್ಲಿ ಸರ್ವೆ ನಂ. 223/A2, ವಿಸ್ತೀರ್ಣ 4 ಎಕರೆ 9 ಸೆಂಟ್ಸ್ ಜಮೀನು ಮಾರಾಟಕ್ಕಿದೆ. ನಾಗರಾಜು 82173 29069

**ಮಳಿಗೆ & ಗೋಡೌನ್ ಬಾಡಿಗೆಗೆ ಇದೆ**
60 ಅಡಿ ರಸ್ತೆ ಗೆ ಲಗತ್ತಾಗಿರುವ DHM ಚರ್ಚ್ ಪಕ್ಕ ಎಸ್.ಎಸ್. ಆಸ್ಪತ್ರೆ ರಸ್ತೆಯಲ್ಲಿನ ಮಳಿಗೆ ಅಟ್ಯಾಚ್ ಗೋಡೌನ್ ಬಾಡಿಗೆಗೆ ದೊರೆಯುತ್ತದೆ. 99451 73237

**ದೊಡ್ಡ ಓಬಜ್ಜಿಹಳ್ಳಿಯಲ್ಲಿ**
ರೋಡಿಗೆ 11 ಗುಂಟೆ ಜಮೀನು ಮಾರಾಟಕ್ಕೆ ಇದೆ. (ಊರಿಗೆ ಲಗತ್ತು) ಸೈಟ್ ಮಾಡಲು ಅನುಕೂಲವಾಗಿದೆ. 98447 42251

**ಕಮರ್ಷಿಯಲ್ ಬಿಲ್ಡಿಂಗ್ ಮಾರಾಟಕ್ಕಿದೆ**
1800 ಚದುರಡಿಯ 4 ಅಂತಸ್ತಿನ ಕಮರ್ಷಿಯಲ್ ಬಿಲ್ಡಿಂಗ್ DCM ಟೌನ್ ಶಿಫ್ SS Hitech ಗೆ ಹೋಗುವ ರಸ್ಥೆಗೆ ಹೊಂದಿ ಕೊಂಡಿರುತ್ತದೆ. ಸಂಪರ್ಕಿಸಿ : 99640 49273

**ವಾಣಿಜ್ಯ ಕಟ್ಟಡ ಬಾಡಿಗೆಗಿದೆ**
ದಾವಣಗೆರೆ ನಗರದ ಎಂಸಿಸಿ 'ಎ' ಬ್ಲಾಕ್, 4ನೇ ಮೇನ್‌ನಲ್ಲಿ ಆಸ್ಪತ್ರೆ, ಮೆಡಿಕಲ್ ಫಾರ್ಮಸಿ, ಗೋಡೌನ್, ಪಿ.ಜಿ ಹಾಸ್ಟೆಲ್‌ಗೆ ಯೋಗ್ಯವಿರುವ ನಾಲ್ಕು ಬೆಡ್ ರೂಂನ, 5000 ಚದುರ ಅಡಿ ವಿಸ್ತೀರ್ಣದ ಎರಡು ಅಂತಸ್ತಿನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ 94802 91999

**TUITIONS PCMB/CS**
5th Std to 10th Std Science, Maths ಸಮೃದ್ಧಿ ಅಕಾಡೆಮಿ 96202 62361

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ : 99863 61250

**ತಕ್ಷಣವೇ ಸೇಲ್ಸ್ ಮ್ಯಾನೇಜರ್ ಬೇಕಾಗಿದ್ದಾರೆ**
ದಾವಣಗೆರೆ, ಪಿ.ಬಿ. ರಸ್ತೆಯಲ್ಲಿರುವ ಹಾರ್ಡ್‌ವೇರ್ & ಪ್ಲೈವುಡ್ ಶೋಂ ರೂಂಗೆ ಸೇಲ್ಸ್ ಮ್ಯಾನೇಜರ್ ಬೇಕಾಗಿದ್ದಾರೆ. 97432 31022

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಮಾರಾಟಕ್ಕಿವೆ. ಬಿ.ಎಸ್. ಸಂತೋಷ 96322 67555

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 40x60 ಪೂರ್ವ 30x55 ಪೂರ್ವ ಅಕ್ಕ-ಪಕ್ಕ, ಹಳೆಕುಂದುವಾಡದಲ್ಲಿ 40x48 ಕಾರ್ನರ್ ಪೂರ್ವ-ದಕ್ಷಿಣ ಪಶ್ಚಿಮ 3 ಕಡೆ ರಸ್ತೆ ಇದೆ. ಸರ್ಕಾರಿ ನೌಕರರ ಬಡಾವಣೆಯಲ್ಲಿ 30x50 ಉತ್ತರ, 30x40 ಪೂರ್ವ ಸೈಟ್‌ಗಳು ಮಾರಾಟಕ್ಕಿವೆ. ಮಿಟ್ಲಕಟ್ಟೆಯಲ್ಲಿ 20 ಗುಂಟೆ ಜಮೀನು ಮಾರಾಟಕ್ಕೆ CC ರಸ್ತೆಗೆ ಇದೆ. 24x44 ಮನೆ KB ಬಡಾವಣೆಯಲ್ಲಿ ಮಾರಾಟಕ್ಕೆ ಇದೆ. ಸಂಪರ್ಕಿಸಿ : ಸುರೇಶ್ ಪಿ.ಎಸ್. ಶಾಮನೂರು (ಪ್ರಾಪರ್ಟಿ ಅಡ್ವೈಸರ್) 84314 00907

**ನಿವೇಶನ ಮಾರಾಟಕ್ಕಿದೆ**
40 ಅಡಿ ರಸ್ತೆಗೆ ಅಳತೆ 30/55 ಪೂರ್ವ, ಗ್ಲಾಸ್ ಹೌಸ್ ಹತ್ತಿರ ಆಸಕ್ತರು ಸಂಪರ್ಕಿಸಿ ಮಾಲೀಕರು : ನಾಗರಾಜ್ 97419 24333

**SITE FOR SALE**
SS Badavane `A' Block East facing 60x40 Feet size MBA College Road Post Office Left Side Cross Road. Contact : 91138 89042

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ 99863 61250 80739 48857

Sri Nidhi Educational Trust (R)
**ನೇರ ಪರೀಕ್ಷೆಗಳು**
SSLC, PUC, BA., B.Com., BCA, MA., M.Com, MSc., Diploma Course, BE., B.Tech, B.Lib, M.Lib, MBA, MCA & All Courses 77609 55550

**ವಾಟರ್ ಪ್ರೂಫಿಂಗ್ ನೀರಿನ ಲೀಕೇಜ್**
ನಿಮ್ಮ ಮನೆಯ ಮತ್ತು ಕಟ್ಟಡಗಳ ಟೆರೇಸ್, ಮೆಟ್ಟಿಲುಗಳು ಬಾತ್ ರೂಂ, ಬಾಲ್ಕನಿ, ಗೋಡೆ ಬಿರುಕು, ಶೀಟುಗಳು ಬಿರುಕು, ಸಂಪು, ನೀರಿನ ತೊಟ್ಟಿ, ಸ್ವಿಮ್ಮಿಂಗ್ ಫೂಲ್ ಇತ್ಯಾದಿ ನೀರಿನ ಲೀಕೇಜ್‌ಗೆ ಸಂಪರ್ಕಿಸಿ : ಕೆಲಸ 100% ಗ್ಯಾರಂಟಿ 80955 09025

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. 94480 47506

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು. 99863 61250, 80730 24690

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ (ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ) ಹಿಂದಿ ಬಿ.ಎ., ಬಿ.ಇಡಿ. ತರಬೇತಿ ಹೊಂದಿದ ಶಿಕ್ಷಕರು ಬೇಕಾಗಿದ್ದಾರೆ. 99640 17729

**HOUSE FOR SALE (KHB COLONY)**
(In Karnataka Housing Board) Kundwada Dimension 30x40 (East Phase) 2 Bedroom, Borewell + Water Connection (Opposite Park) Contact : 81479 61152

**ಸೈಟ್ ಮಾರಾಟಕ್ಕಿದೆ**
ಅಕ್ಕಪಕ್ಕದಲ್ಲಿರುವ ಸೈಟುಗಳು, 30x47 ಮತ್ತು 23x47, ಜಯನಗರ 'ಸಿ' ಬ್ಲಾಕ್, 3ನೆ ಕ್ರಾಸ್, ದಾವಣಗೆರೆ. 99457 27676 97400 85410

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಬಾಪೂಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2. 94481-59303, 94834 63783

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಮಾನಸ ಕಮ್ಯೂನಿಟಿ ಕಾಲೇಜ್ (ರಿ) LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002. 97402 58276

**WANTED**
**Accountant**
Requirement for Davangere Branch. Experience 2 year Tally ERP 9
**Sri Lakshmi Venkateshwara Granites & Marbles**
# 2002/1 to 2002/7, Taralabalu Extn., Hadadi Main Road, Davangere-577004. E-mail : slvgmdvg2010@gmail.com 90086-60111

**ಬೇಕಾಗಿದ್ದಾರೆ**
AGADI MOTORS PRIVATE LIMITED
ಟ್ರ್ಯಾಕ್ಟರ್ ಮಾರಾಟ ಮಾಡಲು ದಾವಣಗೆರೆ ಜಿಲ್ಲೆಯ ಪ್ರತಿ ಹೋಬಳಿ ಕೇಂದ್ರಗಳಲ್ಲಿ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ. ಅರ್ಹತೆ : ಸ್ವಂತ ದ್ವಿಚಕ್ರ ವಾಹನ ಹೊಂದಿರಬೇಕು, ಕನಿಷ್ಠ 2 ವರ್ಷಗಳ ಅನುಭವ ಹೊಂದಿರಬೇಕು (ಫೋನ್ ಮಾಡಬಾರದು) WhatsApp your resume to 9945221201

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ ಮಂಡಿಪೇಟೆ, ದಾವಣಗೆರೆ. ಮೊಬೈಲ್ : 94487 27084

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.** ಸಂಪರ್ಕಿಸಿ : 81056 99985 89715 04492

**ಹೊಸಮನೆ ಬಾಡಿಗೆಗಿದೆ**
ಎಂಸಿಸಿ 'ಬಿ' ಬ್ಲಾಕ್, 9ನೇ ಮೇನ್, ದಾವಣಗೆರೆ ಹಾರ್ಟ್ ಆಸ್ಪತ್ರೆ ಹತ್ತಿರ, 2 ಬೆಡ್ ರೂಮ್ ಇರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ. ಮುನ್ಸಿಪಲ್ ಮತ್ತು ಬೋರ್ ನೀರಿನ ಸೌಲಭ್ಯವಿದೆ. ಸಸ್ಯಾಹಾರಿಗಳಿಗೆ ಮಾತ್ರ 08192 220207

**ROOM FOR RENT**
2nd Main, 11th cross Nijalingappa Layout Davangere. 97433 47759, 7019 791311

**FLAT FOR LEASE**
3 BHK, Sqft :1888 AM Apartment, Nainika Prime Rose, Vidyanagar Last City Bus Stop, Davanagere. 89519 38228, 80502 22181

**ವಧು ಬೇಕಾಗಿದ್ದಾರೆ**
ಎರಡನೇ ಸಂಬಂಧ ವಧು ಬೇಕಾಗಿದ್ದಾರೆ. ಅಕ್ಕಿ & ಕಿರಾಣಿ ಹೋಲ್ ಸೇಲ್ ಮರ್ಚಂಟ್, 44 ವರ್ಷ 89047 54519 86184 74929

## ಡಾ.ಎಸ್‌ಎಸ್‌ಎನ್‌ಪಿ ಶಾಲೆಯಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಣೆ



ದಾವಣಗೆರೆ, ಜು. 27 - ಡಾ. ಎಸ್.ಎಸ್.ಎನ್. ಪಿ. ಶಾಲೆಯಲ್ಲಿ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮ ಆಯೋಜಿಸಲಾಗಿತ್ತು

ಬಾಪೂಜಿ ವಿದ್ಯಾಸಂಸ್ಥೆಯ ಡೀನ್ ಮಂಜುನಾಥ ರಂಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ನಿವೃತ್ತ ಸೇನಾಧಿಕಾರಿ ಕಲ್ಯಾಣ್‌ಕುಮಾರ್ ಮಾತನಾಡಿ, ತಮ್ಮ ವೃತ್ತಿ ಜೀವನ ಹಾಗೂ ಯುದ್ಧದ ವಾಸ್ತವ ಸ್ಥಿತಿಯನ್ನು ಮಕ್ಕಳೊಂದಿಗೆ ಹಂಚಿಕೊಂಡರು. ಹಾಗೆಯೇ ಮಕ್ಕಳನ್ನು ದೇಶ ಸೇವೆಗೆ ಸಿದ್ಧರಾಗಲು ಕರೆ ಕೊಟ್ಟರು. ಮಕ್ಕಳು ಕೇಳಿದ ಪ್ರಶ್ನೆಗಳಿಗೆ ಸಮಂಜಸ ಉತ್ತರ ಕೊಡುತ್ತಾ, ಅವರನ್ನು ಪ್ರಶಂಸಿಸಿದರು.

ಕಾರ್ಯಕ್ರಮದ ಉಸ್ತುವಾರಿಯನ್ನು ಪ್ರಾಂಶುಪಾಲರಾದ ಶ್ರೀಮತಿ ಕಮಲ್ ಬಿ. ನಾರಾಯಣ ವಹಿಸಿದ್ದರು. ಸೈನಿಕರಂತೆ ವೇಷಭೂಷಣಧಾರಿಯಾದ ರವೀಂದ್ರ ಅರಳಗುಪ್ಪಿಯವರು ಏಕಪಾತ್ರಾಭಿನಯ ಮಾಡಿದರು.

ಈ ಸಂದರ್ಭದಲ್ಲಿ ಉಪ ಪ್ರಾಂಶುಪಾಲರಾದ ರಮೇಶ್‌ಬಾಬು, ಶಾಲಾ ಸಂಯೋಜಕರಾದ ಶ್ರೀಮತಿ ರುತಿಕಾ, ಬೋಧಕ, ಬೋಧಕೇತರ ಸಿಬ್ಬಂದಿಗಳು, ಮಕ್ಕಳು ಉಪಸ್ಥಿತರಿದ್ದರು.

## ಇಂದು ಕಲಾಕುಂಚದಿಂದ ಪ್ರಶಸ್ತಿ ಪ್ರದಾನ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭವು ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ.

ಬೆಂಗಳೂರಿನ ಜನಸಿರಿ ಫೌಂಡೇಷನ್ ಸಂಸ್ಥಾಪಕರೂ, ಸಾಹಿತಿಗಳಾದ ನಾಗಲೇಖ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಕಲಾಕುಂಚ ಕೇರಳದ ಗಡಿನಾಡ ಶಾಖೆಯ ಸಹ ಕಾರ್ಯದರ್ಶಿ, ಹಿರಿಯ ಸಾಹಿತಿ ಜಯಲಕ್ಷ್ಮಿ ಕಾರಂತ್, ರಾಮಚಂದ್ರ ಹೊಳ್ಳ, ಬೆಂಗಳೂರಿನ ದೂರದರ್ಶನ ಕೇಂದ್ರದ ಚಂದನ ವಾಹಿನಿಯ ನಿರೂಪಕ ಹೆಚ್.ರಾಜಶೇಖರ ಭಾಗವಹಿಸಲಿದ್ದಾರೆ.

ಕರ್ನಾಟಕದಲ್ಲಿ 2023-24ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625ಕ್ಕೆ 625 ಪರಿಪೂರ್ಣ ಅಂಕ ಪಡೆದ ಶೈಕ್ಷಣಿಕ ಯುವ ಸಾಧಕಿ, ಬೆಂಗಳೂರಿನ ಬಿ.ಎನ್.ಆರ್. ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡಿದ ಭಾವನ ಟಿ.ಎಸ್. ಆಗಮಿಸಲಿದ್ದಾರೆ.

## ನಗರದಲ್ಲಿ ಇಂದು ಪದ್ಮಸಾಲಿ ಸಮಾಜದಿಂದ ಪ್ರತಿಭಾ ಪುರಸ್ಕಾರ

ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದ ವತಿಯಿಂದ ನಗರದ ಮಾರ್ಕಂಡೇಶ್ವರ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 3ಕ್ಕೆ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಲಾಗಿದೆ.

ಪದ್ಮಶಾಲಿ ಸಮಾಜದ ಗುರುಗಳಾದ ಪ್ರಭುಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದು, ಎಂ.ಎಸ್ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ನಂಬಿಯಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಪಿ.ಜೆ. ನಾಗರಾಜ್, ಉಪಾಧ್ಯಕ್ಷ ಟಿ. ರಮೇಶ್, ಗೌರವಾಧ್ಯಕ್ಷ ವೆಂಕಟೇಶ್ ಎಲ್. ಲಿಂಗಂಪಲ್ಲ, ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಸುಧಾ, ಜೆ.ಟಿ. ರಾಮಕೃಷ್ಣ, ಎಸ್.ಹೆಚ್. ಆನಂದ, ಬಿ.ಎಸ್. ಅನಿಲ್ ಕುಮಾರ, ಡಿ.ಕೆ. ಉಮೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ಭಾರತ ಬಲಿಷ್ಠ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಲು ಅಬ್ದುಲ್ ಕಲಾಂ ಪಾತ್ರ ಹಿರಿದು

ದಾವಣಗೆರೆ, ಜು. 27- ಭಾರತ ಬಲಿಷ್ಠ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಲು ವಿಶ್ವವಿಖ್ಯಾತ ವಿಜ್ಞಾನಿ, ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಪಾತ್ರ ಹಿರಿದು ಎಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕಲಾಂ ಅವರ ರಾಷ್ಟ್ರಸೇವೆಯನ್ನು ಸ್ಮರಿಸಿದರು.

ನಗರದ ಹನಗೋಡಿ ಮಠ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾ ಬಿಜೆಪಿ ಅಲ್ಪಸಂಖ್ಯಾತರ ಘಟಕದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಡಾ. ಅಬ್ದುಲ್ ಕಲಾಂ ಅವರ 9 ನೇ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ದಿ ಮಿಸೈಲ್ ಮ್ಯಾನ್' ಎಂದೇ ಖ್ಯಾತಿ ಹೊಂದಿದ್ದ ಅಬ್ದುಲ್ ಕಲಾಂ ಅವರು ಅಣು ಸ್ಥಾವರ ಸ್ಥಾಪಿಸಿದರಲ್ಲದೇ, ಪೋಕ್ರಾನ್ ನಲ್ಲಿ ನಡೆದ ಅನೇಕ ಪರಮಾಣು ಪರೀಕ್ಷೆಗಳ ನೇತೃತ್ವ ವಹಿಸಿಕೊಳ್ಳುವ ಮೂಲಕ ರಾಷ್ಟ್ರವನ್ನು ಬಲಶಾಲಿಯಾಗಿ ಬೆಳೆಸಿದರು ಎಂದು ಹೇಳಿದರು.

ಅಬ್ದುಲ್ ಕಲಾಂ ಅವರು 2007 ರಲ್ಲಿ ರಾಷ್ಟ್ರಪತಿಯಾಗಬೇಕೆಂಬುದು ಎಲ್ಲ ಭಾರತೀಯರ ನಿರೀಕ್ಷೆ ಆಗಿತ್ತು. ಆದರೆ ಬದಲಾದ ರಾಜಕೀಯ ಬೆಳವಣಿಗೆಯಿಂದಾಗಿ ಪ್ರತಿಭಾ ಪಾಟೀಲ್ ಅವರು ರಾಷ್ಟ್ರಪತಿಯಾದರು ಎಂದರು. ಯಾರೋ ಒಬ್ಬ ಭಯೋತ್ಪಾದನಾ ಕೃತ್ಯದಲ್ಲಿ ತೊಡಗಿದ್ದಾನೆಂದು ಇಡೀ ಮುಸ್ಲಿಂ ಸಮುದಾಯವನ್ನು ದೂರುವುದು ಸರಿಯಲ್ಲ.



**ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಶ್ಲಾಘನೆ**

ಯಾರೇ ಬಂದರೂ ಮುಸ್ಲಿಮರನ್ನು ಭಾರತದಿಂದ ಹೊರ ಹಾಕಲು ಸಾಧ್ಯವಿಲ್ಲ. ಆದ್ದರಿಂದ ಹಿಂದೂ-ಮುಸ್ಲಿಮರು ಒಂದಾಗಿ ಭಾರತವನ್ನು ಮುನ್ನಡೆಸಬೇಕಾಗಿದೆ ಎಂದು ಹೇಳಿದರು.

ಬಿಜೆಪಿಯವರು ಮುಸ್ಲಿಮರನ್ನು ದೇಶ ಬಿಟ್ಟು ಓಡಿಸುತ್ತಾರೆಂಬ ವಿಪಕ್ಷಗಳ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬೇಡಿ ಎಂದು ತಿಳಿಸಿದರು.

ಬಡತನದಲ್ಲಿ ಬೆಳೆದ ಅಬ್ದುಲ್ ಕಲಾಂ ಅವರು ಸುಸಜ್ಜಿತ, ಸೌಲಭ್ಯವಿರುವ ಶಾಲೆಯಲ್ಲಿ ಓದಲಿಲ್ಲ. ಅವರ ತಂದೆ-ತಾಯಿಂದಿರು ಮೀನು ಹಿಡಿದು ಮಾರಾಟ ಮಾಡಿ ಅವರನ್ನು ಓದಿಸಿದ್ದರು. ಬಡತನದಲ್ಲಿಯೇ ಹುಟ್ಟಿ ಬೆಳೆದ ಅವರು ವಿಶ್ವದ ಖ್ಯಾತ ವಿಜ್ಞಾನಿಯಾಗಿ, ದೇಶದ ರಾಷ್ಟ್ರಪತಿಯಾಗಿ ಭಾರತಾಂಬೆಗೆ ಸೇವೆ ಸಲ್ಲಿಸಿದರು. ಅವರ ಸರಳ, ಸಜ್ಜನಿಕೆ ಜೀವನ, ಅವರ ನಡೆ-ನುಡಿ ನಮ್ಮೆಲ್ಲರಿಗೂ ಸ್ಫೂರ್ತಿಯಾಗಬೇಕೆಂದು ಹಿತ ನುಡಿದರು.

ಕಾರ್ಯಕ್ರಮದಲ್ಲಿ ನಸೀರ್ ಅಹಮದ್, ಶಿವನಗೌಡ ಪಾಟೀಲ್, ಗೌತಮ್ ಜೈನ್, ಅನಿಲ್ ಕುಮಾರ್ ನಾಯ್ಕ, ಟಿಪ್ಪುಸುಲ್ತಾನ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಸರ್ಕಾರಿ ಕಟ್ಟಡ ಬಾಳಿಕೆಗಾಗಿ ಸಾರ್ವಜನಿಕರು ನಮ್ಮ ಆಸ್ತಿಯೆಂದು ಭಾವಿಸಿ

### ಮತ್ತಿ ಗ್ರಾಮದ ಸರ್ಕಾರಿ ಶಾಲೆಯ ಅಡುಗೆ ಕೊಠಡಿ ಉದ್ಘಾಟನೆಯಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ

ದಾವಣಗೆರೆ, ಜು.27- ಸರ್ಕಾರಿ ಆಸ್ತಿ ಅಥವಾ ಕಟ್ಟಡಗಳು ನಮ್ಮ ಆಸ್ತಿ ಎಂಬ ಭಾವನೆ ಸಾರ್ವಜನಿಕರಲ್ಲಿ ಬಂದಾಗ ಮಾತ್ರ ಸರ್ಕಾರಿ ಆಸ್ತಿಗಳು ಶಾಶ್ವತ ಬಾಳಿಕೆ ಬರಲಿವೆ ಎಂದು ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್.ಬಸವಂತಪ್ಪ ಹೇಳಿದರು.

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಮತ್ತಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ 6.10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಅಡುಗೆ ಕೊಠಡಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

2010-11ನೇ ಸಾಲಿನಲ್ಲಿ ನಿರ್ಮಿಸಿದ ಸರ್ಕಾರಿ ಪ್ರೌಢ ಶಾಲಾ ಕಟ್ಟಡಗಳು ಈಗಾಗಲೇ ಬಿರುಕು ಬಿಟ್ಟಿವೆ. ಅಲ್ಲದೇ ಕೊಠಡಿ ಶಿಥಿಲಗೊಂಡು ಮಳೆಯಿಂದಾಗಿ ಸೋರುತ್ತಿರುವುದರಿಂದ ಮಕ್ಕಳು ಶಾಲೆಗೆ ಬರದಂತಹ ಪರಿಸ್ಥಿತಿ ಎದುರಾಗಿರುವ ಬಗ್ಗೆ ಶಾಸಕರು ಆಕ್ರೋಶ ವ್ಯಕ್ತಪಡಿಸಿದರು.

ಶಾಲಾ ಕಟ್ಟಡ ನಿರ್ಮಾಣದ ಹಂತದಲ್ಲಿರುವಾಗ ಶಾಲಾ ಸಿಬ್ಬಂದಿಗಳು ಗುತ್ತಿಗೆದಾರರಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಸಿಮೆಂಟ್, ಇಟ್ಟಿಗೆ ಮತ್ತು ಜಲ್ಲಿ ಬಳಸಿದ್ದೀರಿ ಎಂದು ಪರಿಶೀಲನೆ ಮಾಡಿದ್ದರೆ, ಕಳಪೆ ಗುಣಮಟ್ಟದ ಕಟ್ಟಡ ತಲೆ ಎತ್ತಿ ನಿಲ್ಲುತ್ತಿರಲಿಲ್ಲ ಎಂದು ಶಾಲಾ ಸಿಬ್ಬಂದಿಗಳಿಗೆ ತಾಕೀತು ಮಾಡಿದರು.

ಹೆಚ್ಚು ತೇವಾಂಶ ಪ್ರದೇಶದಲ್ಲಿ ಆಳವಾಗಿ ಬುನಾದಿ ತೆಗೆಯದೇ ಕಟ್ಟಡ ನಿರ್ಮಿಸಿರುವುದರಿಂದ ಕಟ್ಟಡ ಬೇಗ ಹಾಳಾಗಲು ಕಾರಣವಾಗಿದೆ. ಆದ್ದರಿಂದ ಯಾವುದೇ ಸರ್ಕಾರಿ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ ಖುದ್ದು ಸ್ಥಳ ಪರಿಶೀಲಿಸಿ ಜವಾಬ್ದಾರಿ ನಿಭಾಯಿಸಿದರೆ, ಬಾಳಿಕೆ ಬರುವ ಕಟ್ಟಡ ಕಾಣುತ್ತೀರಿ ಎಂದು ಶಾಲಾ ಸಿಬ್ಬಂದಿಗಳಿಗೆ ಸಲಹೆ ನೀಡಿದರು.



**ಶಾಲಾ ಕೊಠಡಿ ಪರಿಶೀಲನೆ..!**

2010-11ನೇ ಸಾಲಿನಲ್ಲಿ ನಿರ್ಮಾಣಗೊಂಡ ಸರ್ಕಾರಿ ಪ್ರೌಢ ಶಾಲೆಯ ಕೊಠಡಿಗಳನ್ನು ಪರಿಶೀಲಿಸುವಾಗ ಶಾಲೆಯ ಕೊಠಡಿಗಳು ಬಿರುಕು ಬಿಟ್ಟಿರುವುದು, ಒಡೆದ ಹೆಂಚು, ಮುರಿದ ಬಾಗಿಲುಗಳು ಕಂಡು ಬಂದಿವೆ.

ಈ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿ.ಪಂ. ಸಿಇಓ ಅವರಿಗೆ ಸೂಚಿಸುತ್ತೇನೆ.

- ಕೆ.ಎಸ್.ಬಸವಂತಪ್ಪ, ಶಾಸಕ

**ಭೂಮಿ ಪೂಜೆ :** 12 ಲಕ್ಷ ರೂ. ವೆಚ್ಚದಲ್ಲಿ ಮತ್ತಿ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಶಾಸಕ ಬಸವಂತಪ್ಪ ಭೂಮಿ ಪೂಜೆ ನೆರವೇರಿಸಿದ ಬಳಿಕ ಗುತ್ತಿಗೆದಾರ ಮತ್ತು ಅಧಿಕಾರಿಗಳಿಗೆ ಕಳಪೆ ಕಾಮಗಾರಿ ಮಾಡದಂತೆ ಸೂಚನೆ ನೀಡಿದರು.

ಈ ವೇಳೆ ಹನುಮಂತಪ್ಪ, ಶಿವಣ್ಣ, ಮುನೀರ್, ಮಂಜಣ್ಣ, ಗ್ರಾ.ಪಂ. ಸದಸ್ಯ ಸತೀಶ್, ಪಿಡಿಓ ವನಿತಾ, ಇಂಜಿನಿಯರ್ ವೆಂಕಟೇಶ್, ಶಾಲೆಯ ಮುಖ್ಯಶಿಕ್ಷಕರು, ಸಿಬ್ಬಂದಿ ಮತ್ತು ಊರಿನ ಮುಖಂಡರಿದ್ದರು.

## ವಿದ್ಯಾನಗರ ಇನ್ನರ್ ವ್ಹೀಲ್‌ನಿಂದ ಪೌಷ್ಟಿಕ ಆಹಾರ ಪೋಷಣೆ, ಪದ್ಧತಿ ಉಪನ್ಯಾಸ



ದಾವಣಗೆರೆ, ಜು. 27- ನಗರದ ಮೋತಿ ವೀರಪ್ಪ ಹೈಸ್ಕೂಲ್‌ನಲ್ಲಿ ವಿದ್ಯಾನಗರ ಇನ್ನರ್‌ವ್ಹೀಲ್ ಸಂಸ್ಥೆಯಿಂದ ಪೌಷ್ಟಿಕ ಆಹಾರ ಪೋಷಣೆ ಮತ್ತು ಪದ್ಧತಿ ಬಗ್ಗೆ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಪೌಷ್ಟಿಕ ಆಹಾರ ತಜ್ಞೆ ಶ್ರೀಮತಿ ತಾರಾದೇವಿ ಮಾತನಾಡಿ, ಮಕ್ಕಳ ಪೋಷಣೆ ಮತ್ತು ಬೆಳವಣಿಗೆಯ ಬಗ್ಗೆ ಸುದೀರ್ಘ ವಿವರಣೆ ನೀಡಿದರು. ಮಕ್ಕಳ ಬೆಳವಣಿಗೆಗೆ ಕಾರ್ಬೋಹೈಡ್ರೇಟ್ಸ್, ಪ್ರೊಟೀನ್, ಫ್ಯಾಟ್ಸ್, ವಿಟಮಿನ್ಸ್ ಹೇಗೆ ಸಹಕಾರಿಯಾಗಬಲ್ಲವು ಎಂಬುದನ್ನು ವಿವರಿಸಿದರು. ಆರೋಗ್ಯಕರವಾದ ಆಹಾರವನ್ನು ಸೇವಿಸಬೇಕು ಹಾಗೂ ಬೀದಿ ಬದಿ ಆಹಾರವನ್ನು ತ್ಯಜಿಸಬೇಕು ಹಾಗೂ ಎಲ್ಲಿ ಸ್ವಚ್ಛತೆ ಇರುತ್ತದೆಯೋ ಅಲ್ಲಿ ದೇವರು ನೆಲೆಸಿರುತ್ತಾನೆ ಎಂಬುದನ್ನು ಸ್ವಚ್ಛ ಆರೋಗ್ಯದ ಬಗ್ಗೆ ಒತ್ತಿ ಹೇಳಿದರು.

ಮೋತಿ ವೀರಪ್ಪ ಹೈಸ್ಕೂಲ್‌ನ ಉಪ ಪ್ರಾಂಶುಪಾಲರಾದ ಕಲ್ಪಿತ ರಾಣಿಯವರು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷರಾದ ಪ್ರೇಮಾ ಮಹೇಶ್ವರಪ್ಪ, ಹಿರಿ-ಕಿರಿಯ ಸದಸ್ಯರು, ಶಾಲಾ ಶಿಕ್ಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವೀರಣ್ಣ ವಂದಿಸಿದರು.

## ನಗರದಲ್ಲಿ ಇಂದು ಬೆಣ್ಣೆನಗರಿ ಸಾಹಿತ್ಯ ಸಂಭ್ರಮ

ದಾವಣಗೆರೆ, ಜು.27- ರಾಜ್ಯ ಕರುನಾಡ ಹಣತೆ ಕವಿ ಬಳಗ ಮತ್ತು ಸಾಂಸ್ಕೃತಿಕ ಕಲಾ ತಂಡದಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ನಾಳೆ ದಿನಾಂಕ 28ರ ಭಾನುವಾರ ಬೆಳಗ್ಗೆ 9ಕ್ಕೆ 'ಬೆಣ್ಣೆನಗರಿ ಸಾಹಿತ್ಯ ಸಂಭ್ರಮ' ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಅಧ್ಯಕ್ಷ ಕನಕ ಪ್ರೀತೀಶ್ ತಿಳಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಜಿಲ್ಲಾ ಘಟಕದ ಉದ್ಘಾಟನೆ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಮ್ಮೇಳನ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

'ಸಾಮಾಜಿಕ ಪಿಡುಗು' ಎಂಬ ವಿಷಯ ಕುರಿತು ಸ್ಥಳದಲ್ಲೇ ದಾಖಲೆ ಬರಹ ಮತ್ತು ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಎಸ್.ವಿ. ಶಾಂತ ಕುಮಾರ್ ಬರೆದ 'ಕನಸು ಚಿಗುರೊಡೆಯಿತು' ಮತ್ತು ಡಾ. ಶ್ರೀದೇವಿ ಸೂರ್ಯ ಸುವರ್ಣಖಂಡಿ ಬರೆದ 'ಶ್ರಾವ್ಯ' ಕೃತಿಯನ್ನು ಕೆ. ಶಾಂತಾ ಬಸವರಾಜ್ ಬಿಡುಗಡೆಗೊಳಿಸಲಿದ್ದಾರೆ.

ಸಾಹಿತಿ ಡಾ. ಗಂಗಾಧರ ವ.ಮ. ಆತ್ರೇಯ ಸಮ್ಮೇಳನವನ್ನು ಉದ್ಘಾಟಿಸುವರು. ಡಾ. ಶ್ರೀದೇವಿ ಸೂರ್ಯ ಸುವರ್ಣಖಂಡಿ ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ಡಾ.ಎಸ್.ಎಚ್. ಶಫೀಉಲ್ಲಾ, ಎಸ್.ವಿ. ಶಾಂತ ಕುಮಾರ್, ಕಾರ್ತಿಕ್ ಆಚಾರ್ಯ ಎಂ. ಕಲ್ಲಹಳ್ಳಿ, ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ, ಗೋ ಸೇವಕ ಮಹೇಂದ್ರ ಮುನೋತ್, ಎನ್.ಟಿ. ಎರ್ರಿಸ್ವಾಮಿ ಮತ್ತು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಬಿಳಿಚೋಡು ಹೋಬಳಿ ಘಟಕದ ಕಸಾಪ ಅಧ್ಯಕ್ಷ ಎಂ.ರಾಜಪ್ಪ ವ್ಯಾಸಗೊಂಡನಹಳ್ಳಿ, ಕರುನಾಡ ಹಣತೆ ಕವಿ ಬಳಗದ ಜಿಲ್ಲಾಧ್ಯಕ್ಷ ಎಸ್.ವಿ.ಶಾಂತಕುಮಾರ್, ಗದಿಗೆಪ್ಪ ಹಾವೇರಿ ಸುದ್ದಿಗೋಷ್ಠಿಯಲ್ಲಿದ್ದರು.

## ನಗರಕ್ಕೆ ಇಂದು ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ

ರಾಜ್ಯ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಇಂದು ನಗರಕ್ಕಾಗಮಿಸಲಿದ್ದಾರೆ. ಬಾಪೂಜಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿನ ಎಸ್.ಎಸ್ ಮಲ್ಲಿಕಾರ್ಜುನ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾ ಛಲವಾದಿ ಮಹಾಸಭಾದಿಂದ ಇಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸಲಿದ್ದು, ನಂತರ ಮಧ್ಯಾಹ್ನ 3.30 ಕ್ಕೆ ಬೆಂಗಳೂರಿಗೆ ತೆರಳುವರು.



## ಕರಾಟೆಯಲ್ಲಿ ಗಣೇಶ್ ವಿಶ್ವಕರ್ಮ ಪ್ರಥಮ

ದಾವಣಗೆರೆ, ಜು. 26 - ಇತ್ತೀಚೆಗೆ ನಗರದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ನಗರದ ಚೌಕಿಪೇಟೆಯಲ್ಲಿರುವ ಶರಣ ಗೌಡರು ಕರಾಟೆ ಶಾಲೆಯ ಪಟು ಆರ್.ಜೆ. ಗಣೇಶ್ ವಿಶ್ವಕರ್ಮ ಇವರು ಪ್ರಥಮ ಸ್ಥಾನ ಪಡೆದಿದ್ದಾರೆ.

## ಚಕಮಕಿಯಲ್ಲಿ ಸೈನಿಕ ಹುತಾತ್ಮ

ನವದೆಹಲಿ, ಜು. 27 - ಪಾಕಿಸ್ತಾನದ ಗಡಿ ಕ್ರಿಯಾ ತಂಡವು ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ದಾಳಿ ನಡೆಸಲು ಪ್ರಯತ್ನಿಸಿದ್ದನ್ನು ಭಾರತೀಯ ಸೈನ್ಯ ವಿಫಲಗೊಳಿಸಿದೆ. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ನುಸುಳುಕೋರ ನೋರ್ವನನ್ನು ಹೊಡೆದುರುಳಿಸಲಾಗಿದೆ. ಪಾಕಿಸ್ತಾನದ ಗಡಿ ಕ್ರಿಯಾ ತಂಡ ಸಾಮಾನ್ಯವಾಗಿ ಸೈನಿಕರು ಹಾಗೂ ಉಗ್ರರನ್ನು ಒಳಗೊಂಡಿದೆ. ಉಗ್ರರು ನುಸುಳುವ ಯತ್ನ ನಡೆಸಿದಾಗ ಗುಂಡಿನ ಚಕಮಕಿ ಉಂಟಾಗಿ ಸೈನಿಕರೊಬ್ಬರು ಹುತಾತ್ಮರಾಗಿದ್ದಾರೆ ಹಾಗೂ ಇತರೆ ನಾಲ್ವರು ಗಾಯಗೊಂಡಿದ್ದಾರೆ. ಕೆಲ ಗಂಟೆಗಳವರೆಗೆ ಗುಂಡಿನ ಚಕಮಕಿ ನಡೆದಿತ್ತು.

## ಸ್ಕಾಲರ್‌ಶಿಪ್‌ಗೆ ಅರ್ಜಿ ಆಹ್ವಾನ

ದಾವಣಗೆರೆ, ಜು.27- ನಗರದ ಭಾವಸಾರ ವಿಜನ್ ಎಜುಕೇಶನ್ ಟ್ರಸ್ಟ್ ವತಿಯಿಂದ ಭಾವಸಾರ ಕ್ಷತ್ರೀಯ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಎಸ್ಸೆಸ್ಸೆಲ್ಸಿ ದ್ವಿತೀಯ ಪಿ.ಯು.ಸಿ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್ ಶೀಪ್ ನೀಡಲಾಗುವುದು. ನಾಡಿದ್ದು ದಿನಾಂಕ 29 ರೊಳಗೆ ನಿಗದಿತ ಅರ್ಜಿಯನ್ನು ನಗರದ ಮಹಾರಾಜಪೇಟೆಯಲ್ಲಿರುವ ಶ್ರೀ ವಿಠಲ ಮಂದಿ ರದ ವ್ಯವಸ್ಥಾಪಕರಲ್ಲಿ ಪಡೆದು ಇದೇ ದಿನಾಂಕ 30 ರೊಳಗೆ ಭರ್ತಿ ಮಾಡಿದ ಅರ್ಜಿಯನ್ನು ವ್ಯವಸ್ಥಾಪಕರಲ್ಲಿ ಸಲ್ಲಿಸುವಂತೆ ಟ್ರಸ್ಟ್ ಅಧ್ಯಕ್ಷ ವಾಗೀಶಬಾಬು ಗುಜ್ಜರ್ ತಿಳಿಸಿದ್ದಾರೆ.

## ನಗರದ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದಿಂದ ಇಂದು ಸಮವಸ್ತ್ರ ವಿತರಣೆ



ದಾವಣಗೆರೆ, ಜು. 27- ನಗರದ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ನಾಳೆ ದಿನಾಂಕ 28 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸಮವಸ್ತ್ರ, ಶೂ, ದಿಂಬು ಸೇರಿದಂತೆ, ಇತರೆ ಸಾಮಗ್ರಿಗಳ ವಿತರಣಾ ಸಮಾರಂಭ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 1974 ರಲ್ಲಿ ಪ್ರಾರಂಭವಾದ ಹಾಸ್ಟೆಲ್‌ನಲ್ಲಿ ಇರುವ ನೂರು ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ, ದಿಂಬು ವಿತರಣೆ ಮಾಡಲಾಗುವುದು ಎಂದು ಹೇಳಿದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ, ಗೃಹ ಸಚಿವ ಡಾ. ಜಿ. ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎಲ್.ಎಂ.ಹನುಮಂತಪ್ಪ, ಎಲ್.ಎಂ.ಹೆಚ್. ಸಾಗರ್, ಜಿ. ರಾಕೇಶ್, ಮಂಜಪ್ಪ ಹಲಗೇರಿ ಉಪಸ್ಥಿತರಿದ್ದರು.

## ವಚನ ಸಾಹಿತ್ಯದಿಂದ ಸಾಮಾಜಿಕ ಪಿಡುಗು ತೊಲಗಿಸಲು ಸಾಧ್ಯ



ದಾವಣಗೆರೆ, ಜು.27- ದೇಶದಲ್ಲಿ ಭ್ರಷ್ಟಾಚಾರವು ಇಂದಿನ ಸಾಮಾಜಿಕ ಪಿಡುಗು ಆಗಿದ್ದು, ಇದನ್ನು ತೊಲಗಿಸಲು ವಚನ ಸಾಹಿತ್ಯದಿಂದ ಸಾಧ್ಯ ಎಂದು ಹೆಮ್ಮನ ಬೇತೂರು ವಿಶ್ವೇಶ್ವರಯ್ಯ ಹೇಳಿದರು.

ತಾಲ್ಲೂಕಿನ ಮೆಳ್ಳೆಕಟ್ಟೆ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಕಳೆದ ವಾರ ನಡೆದ ವಚನ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಚನ ಸಾಹಿತ್ಯ ಕಾಲ ಗರ್ಭದಲ್ಲಿ ಮುಚ್ಚಿ ಹೋಗುವ ಸಂದರ್ಭದಲ್ಲಿ ವಚನಗಳ ಸಂಶೋಧನೆ ಮಾಡಿ ಮನುಕುಲಕ್ಕೆ ಮಹತ್ವದ ಕೊಡುಗೆ ನೀಡಿದ ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ ಸಾಧನೆ ವಿಶೇಷವಾಗಿದೆ ಎಂದು ಸ್ಮರಿಸಿದರು.

ಆರ್.ಡಿ. ಬಿಂದು ರಾಂಪುರ ಮಾತನಾಡಿ, ಬಸವಣ್ಣನವರು ಮನುಕುಲಕ್ಕೆ ಕೊಟ್ಟ ಕೊಡುಗೆ ಅತ್ಯಂತ ಮಹತ್ವವಾದುದು, ಇಂಥಹ ಮಹಾನ್ ವ್ಯಕ್ತಿಯೇ ನಿಜವಾದ ಸಾಂಸ್ಕೃತಿಕ ನಾಯಕ ಎಂದು ಹೇಳಿದರು.

ರುದ್ರಗೌಡರು ಮಾತನಾಡಿ, ವಚನಗಳನ್ನು ಅರಿತು ಬಾಳಿದರೆ ಜೀವನದಲ್ಲಿ ಉತ್ತಮ ಬದಲಾವಣೆ ಕಾಣಬಹುದು. 'ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ, ಇವ ನಮ್ಮವ ಎಂದೆನಿಸಯ್ಯ' ಎಂಬ ವಚನ ಎಲ್ಲರಿಗೂ ಅರ್ಥ ಆದರೆ ಜಗತ್ತಿನಲ್ಲಿ ಅಶಾಂತಿಯೇ ಇರುವುದಿಲ್ಲ ಎಂದು ಅಭಿಪ್ರಾಯ ಪಟ್ಟರು.

ಟಿ. ಎಂ. ಶಿವಮೂರ್ತಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಎ. ಶೋಭಾ, ಷಣ್ಮುಖಪ್ಪ ಸಾಲಿ, ನಾಗರಾಜ್, ಜಿಲ್ಲಾ ಜಾಗತಿಕ ಲಿಂಗಾಯತ ಮಹಾಸಭೆಯ ಅಧ್ಯಕ್ಷ ಆವರಗೆರೆ ರುದ್ರಮುನಿ, ಮರುಳಸಿದ್ದಯ್ಯ, ಕೊಟ್ರೇಶ್ ಪಿ. ಐರಣಿ, ಕರೂರು ಹನುಮಂತಪ್ಪ, ಮುದೇಗೌಡ್ರ ನಾಗರಾಜ್ ಮತ್ತಿತರರಿದ್ದರು.




## ನಗರದ ಜೈನ್ ಶಾಲೆಯಲ್ಲಿ ಕಾರ್ಗಿಲ್ ವಿಜಯ ದಿವಸ್ ದಿನಾಚರಣೆ

ದಾವಣಗೆರೆ, ಜು. 27 - ಜೈನ್ ಪಬ್ಲಿಕ್ ಶಾಲೆಯಲ್ಲಿ 15ನೇ ವಿದ್ಯಾರ್ಥಿ ಪರಿಷತ್ತಿನ ಹೂಡಿಕೆ ಸಮಾರಂಭ ಮತ್ತು 25ನೇ ವರ್ಷದ ಕಾರ್ಗಿಲ್ ವಿಜಯ ದಿವಸವನ್ನು ಇಂದು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವಿದ್ಯಾನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶ್ರೀಮತಿ ಪ್ರಭಾವತಿ ಸಿ. ಶೇತಸನದಿ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಸಮಯದ ಮಹತ್ವವನ್ನು ತಿಳಿಸಿದರಲ್ಲದೇ, ಸಮಾಜದಲ್ಲಿ ಆರೋಗ್ಯವಂತ ಹಾಗೂ ಉತ್ತಮ ನಾಯಕರಾಗಿ ಬಾಳುವಂತೆ ಹಿತ ನುಡಿದರು.

ಇನ್ನೋರ್ವ ಅತಿಥಿಯಾಗಿದ್ದ ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಕಮಲ ಸೊಪ್ಪಿನ್ ಮಾತನಾಡಿ, ಜೀವನದಲ್ಲಿ ಉತ್ತಮ ಕನಸುಗಳನ್ನು ಹೊಂದಿರಿ, ಆ ಕನಸು ನನಸಾಗಲು ಸತತವಾದ ಪ್ರಯತ್ನವಿರಲಿ ಎಂದು ಕರೆ ನೀಡಿದರು.

ಜೈನ್ ಗ್ರೂಪ್ ಸಂಸ್ಥೆಯ ಅಧ್ಯಕ್ಷ ಅಚಲ್ ಚಂದ್ ಜೈನ್ ಅವರು ಪದಾಧಿಕಾರಿ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿ ಕಾರ್ಗಿಲ್ ವಿಜಯ ದಿವಸದ ಬಗ್ಗೆ ಮಾತನಾಡಿ ಶುಭ ಹಾರೈಸಿದರು.

ಪ್ರಾಂಶುಪಾಲ ಎಸ್. ನಟರಾಜ್, ಉಪ ಪ್ರಾಂಶುಪಾಲರಾದ ಯಶೋಧರ ಎಸ್. ಕೆ ಹಾಗೂ ಸಂಯೋಜಕರಾದ ಶ್ರೀಮತಿ ಸೌಮ್ಯ ಕೆ., ಶ್ರೀಮತಿ ಅಭಿಲಾಷ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿನಿಯರಾದ ಕನ್ನಿಕ ಎಲ್.ಎ, ನಂದಿನಿ ಆರ್. ಮತ್ತು ಸ್ವಾಗತವನ್ನು ನಯನ ಟಿ.ಜೆ, ಸಾಯಿನೈನರವರು, ವಂದನಾರ್ಪಣೆಯನ್ನು ಚತಾನ್ ಜಿ. ಜೆ ಯವರು ನೆರವೇರಿಸಿದರು.


WE HAVE ENDLESS CHOICES
FREE COMPUTERIZED EYE TESTING
By Qualified Optometrist
SOUTH INDIA OPTICALS
Near Ram & Co Circle, Beside Bank of Baroda,
P.J. Extension, Davanagere © 08192-231432 • 08192-462073

TO LET (RENT)
Brand New Commercial Complex
Location : # 644, Sri Durga Krupa,
60 feet Road, Nittuvalli,
DAVANGERE-577 004.
* Total Area - 20,000 sqft
* Basement - 3900 sqft,
* Ground Floor - 3900 sqft
* First floor - 3900 sqft
* Second floor - 3900 sqft
* Third floor - 3900 sqft
Amenity :
1) Elevator (lift) 2) Backup Power
Contact : 9036302031, 9036612091

# ವನ್ಯಜೀವಿ ವಿಭಾಗಗಳ ಮುಂಚೂಣಿ ಸಿಬ್ಬಂದಿಗೆ ಕಠಿಣ ಕೆಲಸದ ಭತ್ಯೆ

ಬೆಂಗಳೂರು, ಜು. 27 - ವನ್ಯಜೀವಿ ವಿಭಾಗಗಳ ಮುಂಚೂಣಿ ಸಿಬ್ಬಂದಿಗಳಿಗೆ ಕಠಿಣ ಕೆಲಸದ ಭತ್ಯೆ (ಹಾರ್ಡ್‌ಶಿಪ್ ಅಲೋಯನ್ಸ್) ಮಂಜೂರು ಮಾಡಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಆದೇಶ ಹೊರಡಿಸಿರುವ ಅವರು, ಅರಣ್ಯ ಇಲಾಖೆ ಸಿಬ್ಬಂದಿಯ ಬಹು ದಿನಗಳ ಬೇಡಿಕೆ ಈಡೇರಿಸಲಾಗಿದೆ, ವಲಯ ಅರಣ್ಯಾಧಿಕಾರಿ ಮತ್ತು ಉಪವಲಯ ಅರಣ್ಯಾಧಿಕಾರಿಗಳಿಗೆ ಮಾಸಿಕ ತಲಾ 3,500 ರೂ., ಅರಣ್ಯ ರಕ್ಷಕರಿಗೆ 2,700 ರೂ. ಹಾಗೂ 'ಡಿ' ದರ್ಜೆ ನೌಕರರಿಗೆ 2,000 ರೂ. ನೀಡಲು ತೀರ್ಮಾನಿಸಲಾಗಿದೆ ಎಂದಿದ್ದಾರೆ. ಚಿಕ್ಕಮಗಳೂರು, ಹಾಸನ, ಮೈಸೂರು, ಕೊಡಗು, ಚಾಮರಾಜನಗರ, ರಾಮನಗರ ಜಿಲ್ಲೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಹಾಗೂ ಬಂಡೀಪುರ ವ್ಯಾಪ್ತಿಯಲ್ಲಿ ಆನೆ ಹಾವಳಿ ತಡೆಗೆ ರಚಿಸಲಾಗಿರುವ ಕಾರ್ಯಪಡೆಯಲ್ಲಿ ಕೆಲಸ ನಿರ್ವಹಿಸುವ ಹೊರಗುತ್ತಿಗೆ ನೌಕರರು ಸೇರಿದಂತೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾಸಿಕ ಕರ್ತವ್ಯ ನಿರ್ವಹಿಸಿದ 6 ದಿನಗಳಿಗೆ 500 ರೂ. ಆಧಾರದಲ್ಲಿ (ಷರತ್ತಿಗೆ ಒಳಪಟ್ಟು) ತಿಂಗಳಿಗೆ ಗರಿಷ್ಠ 2,000 ರೂ. ನೀಡಲು ಆದೇಶ ಹೊರಡಿಸಲಾಗಿದೆ.

ನಂಜನಗೂಡು, ಎಚ್.ಡಿ.ಕೋಟೆ, ಸರಗೂರು, ಟಿ.ನರಸೀಪುರ, ಮಂಡ್ಯ, ಪಾಂಡವಪುರ, ನಾಗಮಂಗಲ ಹಾಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಿರತೆ ಕಾರ್ಯಪಡೆ, ವನ್ಯಜೀವಿಗಳನ್ನು ಹಿಮ್ಮೆಟ್ಟಿಸುವ ಕ್ಷಿಪ್ರ ಸ್ಪಂದನಾ ಪಡೆ ಮತ್ತು ಅರಣ್ಯದೊಳಗೆ ಕಳ್ಳಬೇಟೆ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿ, ಅಲ್ಲದೆ, ಹೊರಗುತ್ತಿಗೆ ನೌಕರರಿಗೂ ಭತ್ಯೆ ಆದೇಶ ಅನ್ವಯವಾಗಲಿದೆ.

ನಾಗರಹೊಳೆ, ಬಂಡೀಪುರ ಅಭಯಾರಣ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಸಿಬ್ಬಂದಿ, ಹೊರಗುತ್ತಿಗೆ ನೌಕರರು ಚಳಿ, ಮಳೆ, ಗಾಳಿ ಎನ್ನದೆ, ವನ್ಯಜೀವಿಗಳ ದಾಳಿ ಅಪಾಯದ ನಡುವೆಯೂ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವುದನ್ನು ಗಮನಿಸಿ, ವಿಶೇಷ ಭತ್ಯೆ ನೀಡಲು ತೀರ್ಮಾನಿಸಿದ್ದಾಗಿ ಸಚಿವರು ತಿಳಿಸಿದ್ದಾರೆ.

## ರಾಜಸ್ಥಾನ ಸರ್ಕಾರದಿಂದ ಅಗ್ನಿವೀರರಿಗೆ ಮೀಸಲಾತಿ

ಜೈಪುರ, ಜು.27 - ಪೊಲೀಸ್, ಜೈಲು ಹಾಗೂ ಅರಣ್ಯ ಸಿಬ್ಬಂದಿ ನೇಮಕದಲ್ಲಿ ಅಗ್ನಿವೀರರಿಗೆ ಮೀಸಲಾತಿ ಕಲ್ಪಿಸುವುದಾಗಿ ರಾಜಸ್ಥಾನ ಸರ್ಕಾರ ತಿಳಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮ, ಗಡಿಯಲ್ಲಿ ದೇಶ ರಕ್ಷಿಸುವ ಅಗ್ನಿವೀರರಿಗೆ ರಾಜ್ಯ ಪೊಲೀಸ್, ಜೈಲು ಹಾಗೂ ಅರಣ್ಯ ಗಾರ್ಡ್ ಹುದ್ದೆಗಳಲ್ಲಿ ಮೀಸಲಾತಿ ಕಲ್ಪಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಎಷ್ಟು ಪ್ರಮಾಣದ ಮೀಸಲಾತಿ ಕಲ್ಪಿಸಲಾಗುವುದು ಎಂಬುದನ್ನು ಬಹಿರಂಗಪಡಿಸಿಲ್ಲ.

# 70 ಕೋಟಿ ರೂ. ಬೆಳೆ ವಿಮಾ ಹಣ ಬಿಡುಗಡೆ



## ಜಗಳೂರು ಶಾಸಕ ದೇವೇಂದ್ರಪ್ಪ ಅವರಿಗೆ ರೈತರಿಂದ ಸನ್ಮಾನ

ಜಗಳೂರು, ಜು. 28 - ಕಳೆದ ವರ್ಷ ಮಳೆ ಕೊರತೆಯಿಂದ ನಷ್ಟ ಅನುಭವಿಸಿದ್ದ ಬರಪೀಡಿತ ತಾಲ್ಲೂಕಿನ ರೈತರಿಗೆ 70.40 ಕೋಟಿ ರೂ. ವಿಮಾ ಹಣ ಬಿಡುಗಡೆಯಾಗಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕೃಷಿ ಇಲಾಖೆ ರೈತರ ಬೆಳೆ ವಿಮೆ ಬಿಡುಗಡೆಗೊಂಡ ಹಿನ್ನೆಲೆಯಲ್ಲಿ ಇಂದು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕೇಂದ್ರ ಬರ ಅಧ್ಯಯನ ತಂಡಕ್ಕೆ ತಾಲ್ಲೂಕಿನ ರೈತರ ಸಮಗ್ರ ಬೆಳೆಗಳ ಸ್ಥಿತಿಗತಿಗಳನ್ನು ಮನವರಿಕೆ ಮಾಡಿಕೊಡಲಾಗಿತ್ತು. ಅದರ ಫಲವಾಗಿ ಅರ್ಹ ಫಲಾನುಭವಿಗಳಿಗೆ ಬೆಳೆ ಪರಿಹಾರ ಸಿಗಲಿದೆ. ಬರ ಪೀಡಿತ ತಾಲ್ಲೂಕು ಪಟ್ಟಿಗೆ ಸೇರ್ಪಡೆಗೊಳಿಸಲಾಯಿತು ಎಂದು ತಿಳಿಸಿದರು.

ಜಿಲ್ಲೆಯಲ್ಲಿಯೇ ಅಧಿಕ ವಿಮಾ ಕಂತು ರೈತರಿಗೆ ಬಿಡುಗಡೆಗೊಂಡಿರುವುದು ಸಂತಸದ ಸಂಗತಿ. ಕಾರಣೀಭೂತರಾದ ರಾಜ್ಯದಲ್ಲಿನ ಕಾಂಗ್ರೆಸ್ ಆಡಳಿತ ಸರ್ಕಾರದ ಕಾಳಜಿ ಹಾಗೂ ರಾಜ್ಯ ಸಚಿವ ಚೆಲುವರಾಯ ಸ್ವಾಮಿ ಅವರ ಸಹಕಾರದಿಂದ ತಾಲ್ಲೂಕಿನ ಮುಸುಕಿನ ಜೋಳ, ಶೇಂಗಾ, ತೊಗರಿ, ಜೋಳ, ರಾಗಿ, ಬೆಳೆಗಳಿಗೆ ವಿಮಾ ಹಣ ಬಿಡುಗಡೆಯಾಗಿದೆ ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಮಾತನಾಡಿ, 2023 ಮುಂಗಾರು ಹಂಗಾಮಿನಲ್ಲಿ ಶೇ. 80 ರಷ್ಟು ವಾಡಿಕೆಗಿಂತ ಕಡಿಮೆ ಮಳೆ ಕಾರಣ ಮೆಕ್ಕೆಜೋಳ ಬೆಳೆ ನಷ್ಟವಾಗಿದ್ದರಿಂದ ತಾಲ್ಲೂಕಿನ 8 ಗ್ರಾ. ಪಂ. ವ್ಯಾಪ್ತಿಗಳಲ್ಲಿ ತಾಂತ್ರಿಕ ದೋಷವಾಗಿದ್ದವು. ವಿಮಾ ಕಂಪನಿಗಳು ವಿಮಾ ಕಂತು ಜಮಾ ಮಾಡುವಲ್ಲಿ ನಿರಾಕರಿಸಿದ್ದವು.

ವಿಮಾ ಕಂಪನಿ ಸರ್ಕಾರದ ಸ್ವಾಮ್ಯದಲ್ಲಿರುವುದರಿಂದ ನಂತರ ರಾಜ್ಯ ಮಟ್ಟದಲ್ಲಿ ಕೃಷಿ ಇಲಾಖೆ ಉನ್ನತ ಮಟ್ಟದ ಅಧಿಕಾರಿಗಳು ಸರಿಪಡಿಸಿದ ಫಲವಾಗಿ ಬೇರೆ ಯಾವ ಜಿಲ್ಲೆಗಳಿಗೂ ಬಾರದ ವಿಮೆ ಜಗಳೂರು ತಾಲ್ಲೂಕಿಗೆ 70 ಕೋಟಿ ಹಣ ಬಿಡುಗಡೆಯಾಗಿದೆ ಎಂದರು.

ತಾಲ್ಲೂಕಿನಲ್ಲಿ ಕಳೆದ ವರ್ಷ 16065 ರೈತರು 1.77ಕೋಟಿ ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 50:50 ಅನುಪಾತದಲ್ಲಿ 15,789 ಜನ ರೈತರಿಗೆ ಒಟ್ಟು 70 ಕೋಟಿ 48 ಲಕ್ಷ ಹಣ ಬಿಡುಗಡೆಯಾಗಿದೆ ಎಂದು ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನಲ್ಲಿ ತಾಲ್ಲೂಕಿನಲ್ಲಿ ಮೆಕ್ಕೆಜೋಳ ಬೆಳೆಗೆ 15,000 ಜನ ಬೆಳೆ ವಿಮಾ ಕಂತು ಪಾವತಿಸಿದ್ದಾರೆ. ಮೆಕ್ಕೆಜೋಳ ಜು. 31 ಕಂತು ಪಾವತಿಸಲು ಕೊನೆಯ ದಿನಾಂಕವಾಗಿದೆ. ಬೆಳೆ ನಷ್ಟ ಪರಿಹಾರಕ್ಕೆ ವಿಮೆ ಸಹಕಾರಿಯಾಗುತ್ತದೆ. ಐದು ವರ್ಷದ ಸರಾಸರಿ ಇಳುವರಿ ಪರಿಗಣನೆ ಮಾಡಿ ವಿಮಾ ಹಣ ಅಂದಾಜಿಸಲಾಗುತ್ತದೆ ಎಂದು ತಿಳಿಸಿದರು.

ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ. ಪಿ. ಪಾಲಯ್ಯ ಮಾತನಾಡಿ, ತಾಲ್ಲೂಕಿನಲ್ಲಿ ನದಿ ಮೂಲಗಳಿಲ್ಲದೆ ಮಳೆಯನ್ನೇ ನಂಬಿರುವ ರೈತರು ಆರ್ಥಿಕ ಸಂಕಷ್ಟದಲ್ಲಿದ್ದು ಕೃಷಿ ಭೂಮಿಯನ್ನೇ ಅವಲಂಬಿಸಿದ್ದಾರೆ. ಬೆಳೆ ವಿಮೆಯಿಂದ ಅನುಕೂಲವಾಗಲಿದೆ ಎಂದರು.

ತಾಲ್ಲೂಕಿನ ರಾಗಿ ಖರೀದಿ ಕೇಂದ್ರದಲ್ಲಿ ಅವ್ಯವಹಾರ ನಡೆದಿದ್ದರೂ ಸಹ ಶಾಸಕರ ಕಾಳಜಿಯಿಂದ ಅರ್ಹ ಫಲಾನುಭವಿಗಳಿಗೆ ಹಂತ ಹಂತವಾಗಿ ಹಣ ಜಮಾ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಶ್ವೇತಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡ ಬಿ. ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಓಮಣ್ಣ, ತಿಮ್ಮಣ್ಣ, ಪ್ರಕಾಶ್ ರೆಡ್ಡಿ, ಆಜಾ ಮುಲ್ಲಾ, ಎ. ವೆಂಕಟೇಶ್, ಪ್ರಕಾಶ್ ರಡ್ಡಿ, ರವಿ ಕುಮಾರ್ ಸೇರಿದಂತೆ ರೈತರು ಇದ್ದರು.

## ಬಜೆಟ್ : ಹೂರಣ ಸಹಿತ ಇರುವ ಸಿಹಿ ಹೋಳಿಗೆಯೇ ಕೊಡಲಾಗಿದೆ



**'ಹೂರಣ ಇಲ್ಲದ ಹೋಳಿಗೆ' ಎಂಬ ನೂತನ ಸಂಸದೆ ಪ್ರಭಾ ಟೀಕೆಗೆ ಮಾಜಿ ಸಂಸದ ಸಿದ್ದೇಶ್ವರ ತಿರುಗೇಟು**

ದಾವಣಗೆರೆ, ಜು. 27 - ರೈತರಿಗೆ, ಯುವಕರು, ಮಹಿಳೆಯರು ಸೇರಿದಂತೆ ಸರ್ವರಿಗೂ ಅನುಕೂಲವಾಗುವ ಬಜೆಟ್ ನೀಡಲಾಗಿದೆ ಎಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.


ಇಂದಿಲ್ಲಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಲಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕೇಂದ್ರ ಬಜೆಟ್ 'ಹೂರಣ ಇಲ್ಲದ ಹೋಳಿಗೆ' ಎಂದು ಟೀಕಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದೇಶ್ವರ ಅವರು ಹೂರಣ ಸಹಿತ ಇರುವ ಸಿಹಿ ಹೋಳಿಗೆಯನ್ನೇ ಕೊಡಲಾಗಿದೆ. ಈ ಬಜೆಟ್ ಅಭಿವೃದ್ಧಿ ಪರ ಇದೆ ಎಂದರು.

ದಾವಣಗೆರೆ ಜಿಲ್ಲಾ ಬಿಜೆಪಿ ಒಡೆದ ಮನೆಯಂತಾಗಿರುವುದು ಸತ್ಯ. ನನ್ನ ಪತ್ನಿ ಸೋಲಿಗೆ ಯಾರು ಕಾರಣ ಅಂತಾ ಇಡೀ ರಾಜ್ಯಕ್ಕೇ ಗೊತ್ತಿದೆ. ಲೋಕಸಭಾ ಚುನಾವಣಾ ಸಂದರ್ಭದಲ್ಲಿ ರಾಜ್ಯ ನಾಯಕರು, ಜಿಲ್ಲಾ ನಾಯಕರು ಬಂದು ನಾಟಕ ಮಾಡಿದ್ದರಿಂದ ನಮಗೆ ಸೋಲಾಯಿತು ಎಂದು ವಾಗ್ದಾಳಿ ನಡೆಸಿದರು.

ಕಳೆದ ವಿಧಾನಸಭಾ ಚುನಾವಣೆ ಬಳಿಕ ದಾವಣಗೆರೆ ಬಾಯ್ಸ್ ಮತ್ತು ಲಗಾನ್ ಬಾಯ್ಸ್ ಎಂಬ ಎರಡು ತಂಡಗಳಾಗಿದ್ದವು. ತಮ್ಮ ಕುಟುಂಬಕ್ಕೆ ಟಿಕೆಟ್ ಸಿಕ್ಕಾಗ ಲಗಾನ್ ಟೀಂ ವಿರೋಧ ವ್ಯಕ್ತಪಡಿಸಿತ್ತು. ಕೊನೆಗೆ ಬಿಎಸ್‌ವೈ ಎಂಟ್ರಿಯಿಂದ ಎರಡೂ ಟೀಂಗಳು ಒಟ್ಟಾಗಿ ಲೋಕಸಭಾ ಚುನಾವಣೆಗೆ ಮುಂದಾಗಿದ್ದವು.

ಆದರೆ ಬಿಜೆಪಿ ಅಭ್ಯರ್ಥಿಗೆ ಸೋಲುಂಟಾದ ಬಳಿಗೆ ಲಗಾನ್ ಬಾಯ್ಸ್ ಟೀಂ ಹಾಗೂ ದಾವಣಗೆರೆ ಬಾಯ್ಸ್ ಟೀಂ ನಡುವೆ ವಾಕ್ಸಮರ ಜೋರಾಗಿಯೇ ನಡೆದಿತ್ತು. ಆದರೆ ಇದೀಗ ಅದಕ್ಕೆ ಪುಷ್ಟಿ ನೀಡುವಂತೆ ಸಿದ್ದೇಶ್ವರ ಅವರು ಜಿಲ್ಲಾ ಬಿಜೆಪಿ ಒಡೆದ ಮನೆಯಂತಾಗಿರುವುದು ಸತ್ಯ. ನಮ್ಮ ಸೋಲಿಗೆ ಯಾರು ಕಾರಣ ಎಂದು ಇಡೀ ರಾಜ್ಯಕ್ಕೇ ಗೊತ್ತಾಗಿದೆ ಎಂದು ಹೇಳುವ ಮೂಲಕ ಲಗಾನ್ ಟೀಂ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

## ನ್ಯಾಮತಿ : ಡೆಂಗ್ಯೂ ಜ್ವರಕ್ಕೆ ಬಾಲಕಿ ಬಲಿ



ನ್ಯಾಮತಿ, ಜು.27 - ಪಟ್ಟಣದ ಎಪಿಎಂಸಿ ನಿವಾಸಿ ಜಿಂಕೇರಿ ಮುರುಗೇಶ ಮತ್ತು ಶೃತಿ ದಂಪತಿಯ ಒಬ್ಬಳೇ ಮಗಳಾದ ಲಿಖಿತಾ (9) ಗೆ ಡೆಂಗ್ಯೂ ಜ್ವರ ಬಂದ ಹಿನ್ನೆಲೆಯಲ್ಲಿ ಕಳೆದ ಮಂಗಳವಾರ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಸಾಂಕ್ರಾಮಿಕ ಡೆಂಗ್ಯೂ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ತಡ ರಾತ್ರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ಮೃತ ಲಿಖಿತಾ 4ನೇ ತರಗತಿ ವಿದ್ಯಾರ್ಥಿನಿ.




## ರಾಣೇಬೆನ್ನೂರು ಪೌರಾಯುಕ್ತರಾಗಿ ಪಕ್ಕೀರಪ್ಪ



ರಾಣೇಬೆನ್ನೂರು, ಜು.27 - ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ ವಲಯ ಆಯುಕ್ತರಾಗಿದ್ದ ಕುಂದಗೋಳ ತಾಲ್ಲೂಕು ತರ್ಲಘಟ್ಟದ ಪಕ್ಕೀರಪ್ಪ ಇಂಗಳಗಿ ಅವರು ರಾಣೇಬೆನ್ನೂರು ನಗರಸಭೆಯ ಪೌರಾಯುಕ್ತರಾಗಿ ಅಧಿಕಾರ ಸ್ವೀಕರಿಸಿದರು.

2004ರಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಆಗಿ ತಮ್ಮ ವೃತ್ತಿ ಜೀವನ ಆರಂಭಿಸಿದ್ದ ಪಕ್ಕೀರಪ್ಪ ಅವರು, 2014 ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಾ, 2017ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಪರೀಕ್ಷೆ ಬರೆದು ಉತ್ತಮ ರ‍್ಯಾಂಕ್ ನೊಂದಿಗೆ ನಗರಾಭಿವೃದ್ಧಿ ಇಲಾಖೆಯ ಸೇವೆಗೆ ಆಯ್ಕೆಯಾಗಿದ್ದರು.

## ಸಿಎ : ಆನಂದ್ ಭಟ್ ಉತ್ತೀರ್ಣ



ರಾಣೇಬೆನ್ನೂರು, ಜು.27 - ನಗರದ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಆಗಿದ್ದ ವಿ.ಕೆ. ಭಟ್ ಹಾಗೂ ವೀಣಾ ಭಟ್ ದಂಪತಿ ಪುತ್ರ ಆನಂದ ಭಟ್ ಅವರು ಸಿಎ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾರೆ.















KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas